# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 56 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 04–09–2023 ಮಂಗಳವಾರ | ಪುಟ: 4 | ಬೆಲೆ : ರೂ.2–00
Volume - 01 Issue - 56 | Title- Code: KARKAN 28269 | Chitradurga | Date: 04-09-2023 Tuesday | Page: 4 | Price: Rs. 2-00



**ಒಳಪುಟದ ಸುದ್ದಿಗಳು**

ಭಗೀರಥ ಮಠದ ಆಸ್ತಿಯನ್ನು ಮಠಕ್ಕೆ ನೀಡಲು ಕ್ರಮ: ಸಚಿವ ಸತೀಶ್ ಜಾರಕಿಹೊಳಿ 2

ದಲಿತ ಸಮೂಹಕ್ಕೆ ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಿನ ಪ್ರಾತಿನಿಧ್ಯ ಅಗತ್ಯ: ಸಚಿವ ತಿಮ್ಮಾಪುರ 3

ಪ್ರಪಂಚ ಕಂಡ ಉತ್ತಮವಾಗ್ಮಿ, ತತ್ವಜ್ಞಾನಿ, ದಾರ್ಶನಿಕ, ಮಾನವತಾ ಮೂರ್ತಿ ರಾಧಾಕೃಷ್ಣನ್ 4


**ಫಾಸ್ಟ್ ನ್ಯೂಸ್**

## ಇಂದು ಶಿಕ್ಷಕರ ದಿನಾಚಾರಣೆ

» ಚಿತ್ರದುರ್ಗ

ಜಿಲ್ಲಾಡಳಿತ, ಜಿಲ್ಲಾಪಂಚಾಯತಿ, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಸೆ.5 ರಂದು ತರಾಸು ರಂಗಮಂದಿರದಲ್ಲಿ ಬೆಳಿಗ್ಗೆ 10:30ಕ್ಕೆ ಡಾ.ಸರ್ವೆಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನೋತ್ಸವ ಅಂಗವಾಗಿ ಶಿಕ್ಷಕರ ದಿನಾಚರಣೆ–2023 ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಲಾಗುವುದು. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಖಾತೆ ಸಚಿವ ಎ. ನಾರಾಯಣಸ್ವಾಮಿ ಕಾರ್ಯಕ್ರಮ ಘನ ಉಪಸ್ಥಿತಿ ವಹಿಸುವರು. ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಉದ್ಘಾಟಿಸುವರು. ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರುಗಳಾದ ಎನ್. ವೈ.ಗೋಪಾಲಕೃಷ್ಣ, ಬಿ.ಜಿ.ಗೋವಿಂದಪ್ಪ, ಡಾ.ಎಂ.ಚಂದ್ರಪ್ಪ, ಟಿ.ರಘುಮೂರ್ತಿ, ಡಾ.ವೈ.ಎ.ನಾರಾಯಣಸ್ವಾಮಿ, ಚಿದಾನಂದ ಎಂ.ಗೌಡ, ಕೆ.ಎಸ್.ನವೀನ್ ಭಾಗವಹಿಸುವರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಮ್ಲಾನ್ ಆದಿತ್ಯ ಬಿಸ್ವಾಸ್, ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ, ಪಾಲ್ಗೊಳ್ಳುವರು

## ಮಕ್ಕಳಲ್ಲಿ ಕಂಡು ಬರುತ್ತಿದೆ ಅಡೆನೊ ವೈರಸ್

ಹವಾಮಾನ ವೈಪರೀತ್ಯದ ಎಫೆಕ್ಟ್‌ನಿಂದಾಗಿ ಆರೋಗ್ಯ ಸಮಸ್ಯೆಗಳು ಕಂಡುಬರುತ್ತಿವೆ. ಅದರಲ್ಲೂಮಕ್ಕಳಲ್ಲಿಅಡೆನೊವೈರಸ್‌ಪ್ರಕರಣಗಳು ಹೆಚ್ಚುತ್ತಿವೆ. ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ ಒಂದರಲ್ಲೇ ಶೇ.20–30 ಕ್ಕಿಂತ ಹೆಚ್ಚು ಮಕ್ಕಳು ಅಡೆನೋ ವೈರಸ್ ಸೋಂಕಿಗೆ ತುತ್ತಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

### ಕವಾಡಿಗರಹಟ್ಟಿಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಭೇಟಿ


# ಮೂಲ ಸೌಕರ್ಯ ಅಭಿವೃದ್ಧಿ ಭರವಸೆ

» ಚಿತ್ರದುರ್ಗ

ಚಿತ್ರದುರ್ಗ ನಗರದ ಕವಾಡಿಗರಹಟ್ಟಿಯ ಮೂಲಸೌಕರ್ಯ ಅಭಿವೃದ್ಧಿಗೆ ನಗರಾಭಿವೃದ್ಧಿ ಇಲಾಖೆ ವತಿಯಿಂದ ರೂ.03 ಕೋಟಿ ಅನುದಾನ ಬಿಡುಗಡೆಗೆ ಜಿಲ್ಲಾಡಳಿತ ಪ್ರಸಾವನೆ ಸಲ್ಲಿಸಿದೆ. ಇದರೊಂದಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ರೂ.1.3 ಕೋಟಿ ಅನುದಾನ ನೀಡಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹೇಳಿದರು.

ಕಲುಷಿತ ನೀರು ಸೇವನೆಯಿಂದ ತೊಂದರೆಗೆ ಒಳಗಾದ ಕವಾಡಿಗರಹಟ್ಟಿಗೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಘಟನೆ ಸಂಭವಿಸಿದ ತಕ್ಷಣ ಸಮಾಜ ಕಲ್ಯಾಣ ಆಯುಕ್ತರಿಗೆ ಸ್ಥಳಕ್ಕೆ ತೆರಳಿ ಅಗತ್ಯ ಕಾರ್ಯ ಕೈಗೊಳ್ಳುವಂತೆ ಸೂಚನೆ ನೀಡಲಾಗಿತ್ತು.. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಪತ್ರ ಬರೆದಿದ್ದೆ. ಕವಾಡಿಗರ ಹಟ್ಟಿಯಲ್ಲಿ ಕಲುಷಿತವಾದ ನೀರು ಸೇವನೆಯಿಂದ 7 ಜೀವಗಳು ಹೋಗಿವೆ. ಮೇಲ್ನೋಟಕ್ಕೆ ಶುಚಿತ್ವ ಹಾಗೂ ಶುದ್ದ ನೀರು ಪೂರೈಸುವಲ್ಲಿ ಸ್ಥಳೀಯ ಆಡಳಿತ ವಿಫಲವಾಗಿರುವುದು ಎದ್ದು ಕಾಣಿಸುತ್ತಾ ಇದೆ. ವೈದ್ಯಕೀಯ ಪರೀಕ್ಷೆಯಲ್ಲಿ ಕಾಲರಾದಿಂದ ಮೃತಪಟ್ಟ ಕುರಿತು ತಿಳಿದು ಬಂದಿದೆ. ಕುಡಿಯುವ ನೀರಿನ ಪೈಪ್ ಹಾಗೂ ಕಲುಷಿತ ನೀರಿನ ಪೈಪು ಹೊಡೆದು ನೀರು ಸೇರಿ ನೀರು ಕಲುಷಿತಗೊಂಡಿರುವ ಸಾಧ್ಯತೆ ಇದೆ. ಘಟನೆಯ ನಂತರ ಎಚ್ಚೆತ್ತು ಚರಂಡಿ





ಹಾಗೂ ಪೈಪ್ ಲೈನ್‌ಗಳ ದುರಸ್ತಿ ಮಾಡಲಾಗಿದೆ. ಹಟ್ಟಿಯಲ್ಲಿ ಆರ್.ಓ ಘಟಕ ತೆರದು ಶುದ್ಧ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಬಾಧಿತ ಪ್ರದೇಶದಲ್ಲಿ ವಾಸಿಸುವ ಎಲ್ಲರಿಗೂ ದವಸ ಧಾನ್ಯಗಳನ್ನು ವಿತರಿಸಲಾಗಿದೆ. ಸ್ಥಳದಲ್ಲಿ ತಾತ್ಕಾಲಿಕವಾಗಿ 24*7 ಚಿಕಿತ್ಸ ಕೇಂದ್ರ ಹಾಗೂ ಔಷಧಾಲಯಗಳನ್ನು ತೆರೆದು ವೈದ್ಯಕಿಯ ತಪಾಸಣೆ ಮಾಡಲಾಗುತ್ತಿದೆ. ಶುದ್ದ ಕುಡಿಯುವ ನೀರು ಹಾಗೂ ವಸತಿ ಸೇರಿದಂತೆ ಹೆಚ್ಚಿನ ಸೌಲಭ್ಯ ಒದಗಿಸಲು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಘಟನೆಯಲ್ಲಿ ಮೃತಪಟ್ಟವರ ಕುಟುಂಬದವರಿಗೆ ಈಗಾಗಲೇ ತಲಾ ಹತ್ತು ಲಕ್ಷ ಪರಿಹಾರ ಧನ ನೀಡಲಾಗಿದೆ. ಇಲ್ಲಿನ ಜನರು ಪರ್ಯಾಯ ಬದುಕು ಕಟ್ಟಿಕೊಳ್ಳಲು ಸರ್ಕಾರ ನೆರವು ನೀಡಲಿದೆ ಎಂದರು.

ಕವಾಡಿಗರಹಟ್ಟಿಯ ಮೂಲಭೂತ ಸೌಕರ್ಯ, ಜನರ ಜೀವನೋಪಾಯಕ್ಕೆ, ವಸತಿ ಸೇರಿದಂತೆ ಪ್ರಮುಖವಾಗಿ 9 ಬೇಡಿಕೆಗಳನ್ನು ಜನರು ಸಲ್ಲಿಸಿದ್ದಾರೆ. ಕಂದಾಯ ಇಲಾಖೆ ಜಾಗದಲ್ಲಿ ಮನೆಕಟ್ಟಿಕೊಂಡು ವಾಸಿಸುತ್ತಿರುವ ಜನರಿಗೆ ಆ ಜಾಗದ ಹಕ್ಕುಪತ್ರ ನೀಡಬೇಕು. ಇದರಿಂದ ಮನೆಗಳು ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ವೇಳೆ ಮನೆ ತೆರವುಗೊಂಡರೆ ಪರಿಹಾರ ಲಭಿಸಲಿದೆ. ಹಾಗಾಗಿ ಅಕ್ರಮ ಸಕ್ರಮ ಯೋಜನೆಯಡಿ ಮನೆ ನಿರ್ಮಿಸಿಕೊಂಡವರಿಗೆ ಜಾಗದ ಹಕ್ಕು ನೀಡುವಂತೆ ಕೋರಿದ್ದಾರೆ. ಈ ಕುರಿತು ನಗರ ಸಭೆ ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಮನವಿ ಪರಿಶೀಲಿಸುವಂತೆ ತಿಳಿಸಿದ್ದೇನೆ. ಇವುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಶಿಫಾರಸ್ಸು ಮಾಡಿ ಕಳುಹಿಸಕೊಡುವಂತೆ ಸೂಚನೆ ನೀಡಿದ್ದೇನೆ ಎಂದರು.ಜನರ ಬೇಡಿಯನ್ನು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ವಸತಿ ರಹಿತರಿಗೆ ಸೂಕ್ತ ವಸತಿ ಸೌಲಭ್ಯ ನೀಡಲು ಜಾಗ ಗುರುತಿಸಲಾಗುತ್ತಿದೆ. ಈಗಾಗಲೇ 3 ಎಕರೆ ಜಾಗ ಲಭ್ಯ ಇರುವ ಕುರಿತು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇಲ್ಲಿ 150 ಮನೆಗಳನ್ನು ನಿರ್ಮಿಸಬಹುದಾಗಿದೆ. ಅಕ್ರಮ ಸಕ್ರಮದ ಬೇಡಿಕೆ ಸರ್ಕಾರ ಮಟ್ಟದಲ್ಲಿ ನಿರ್ಧಾರವಾಗಬೇಕಾದ ವಿಷಯವಾಗಿದೆ. ಸರ್ಕಾರ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು. ವಿಳಂಬವಾಗದ ರೀತಿಯಲ್ಲಿ ಶೀಘ್ರವಾಗಿ ಇಲ್ಲಿನ ಜನರ ಸಮಸ್ಯೆ ಪರಿಹರಿಸಲಾಗುವುದು ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಕವಾಡಿಗರಹಟ್ಟಿಕಲುಷಿತ ನೀರು ಪ್ರಕರಣ ಸಂಬಂಧ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಅವರು ಸೋಮವಾರ ಕವಾಡಿಗರಹಟ್ಟಿಯಲ್ಲಿ ಸ್ಥಾಪಿಸಲಾಗಿರುವ ತಾತ್ಕಾಲಿಕ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ನಂತರ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿ ಪರಿಹಾರದ ಚೆಕ್ ವಿತರಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಟಿ.ರಘುಮೂರ್ತಿ, ಕೆ.ಸಿ.ವೀರೇಂದ್ರ ಪಪ್ಪಿ, ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ, ಮಾಜಿ ಸಚಿವ ಹೆಚ್.ಆಂಜನೇಯ, ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ತಹಶೀಲ್ದಾರ್ ಡಾ.ನಾಗವೇಣಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆರ್.ರಂಗನಾಥ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಜಗದೀಶ್ ಹೆಬ್ಬಳ್ಳಿ, ನಗರಸಭೆ ಪೌರಾಯುಕ್ತೆ ರೇಣುಕಾ ಅಧಿಕಾರಿಗಳು, ಮುಖಂಡರು ಇದ್ದರು.

# ಭೀಕರ ಅಪಘಾತ ನಾಲ್ವರು ಸಾವು

» ಚಿತ್ರದುರ್ಗ

ಭೀಕರ ರಸ್ತೆ ಅಪಘಾತದಲ್ಲಿ ಗಂಡ, ಹೆಂಡತಿ, ಮಗಳು ಸೇರಿದಂತೆ ನಾಲ್ಕು ಜನರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚಿತ್ರದುರ್ಗ ಸಮೀಪದ ಮಲ್ಲಾಪುರ ಗೊಲ್ಲರಹಟ್ಟಿ ಸಮೀಪ ಸೋಮವಾರ ಬೆಳಗ್ಗೆ ಸಂಭವಿಸಿದೆ.


ತುಮಕೂರು ಮೂಲದ ಖಲೀಲ್(42), ಹೆಂಡತಿ ಮಲ್ಲಿಕಾ(37), ಮಗಳು ತಬ್ರೇಜ್(13) ಹಾಗೂ ಕಾರು ಚಾಲಕ ಸಂಸುದ್ದೀನ್(40) ಅಪಘಾತದಲ್ಲಿ ಮೃತಪಟ್ಟಿರುವ ದುರ್ದೈವಿಗಳಾಗಿದ್ದು, ಖಲೀಲ್ ಮಲ್ಲಿಕಾ ಮಕ್ಕಳಾದ ನರ್ಗಿಶ್, ರೆಹಾನ್, ರೆಹಮಾನ್ ಇವರುಗಳು ಗಂಭೀರವಾಗಿ ಗಾಯಗೊಂಡಿದ್ದು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ತುಮಕೂರಿನಲ್ಲಿ ಖಲೀಲ್ ಹಾಗೂ




ಮಲ್ಲಿಕಾ ದಂಪತಿಗಳು ತಮ್ಮ ನಾಲ್ಕು ಜನ ಮಕ್ಕಳೊಂದಿಗೆ ವಾಸವಿದ್ದು, ಕಳೆದ ಎರಡು ದಿನಗಳ ಹಿಂದೆಯಷ್ಟೇ ಬೆಳಗಾಂ ಜಿಲ್ಲೆಗೆ ತಮ್ಮ ಮನೆಯ ಕೆಲಸದ ನಿಮಿತ್ತ ತೆರಳಿದ್ದರು ಎಂದು ಹೇಳಲಾಗುತ್ತಿದ್ದು, ನಿನ್ನೆ ದಿನ ಕೆಲಸ ಮುಗಿದಿದ್ದರಿಂದ ವಾಪಸು ತಮ್ಮ ವಾಸದ ಊರು ತಮಕೂರಿಗೆ ಬೆಳಗಾಂ ನಲ್ಲೇ ಬಾಡಿಗೆ ಕಾರನ್ನು ಬಾಡಿಗೆಗೆ ಪಡೆದು ಚಾಲಕ ಶಂಶುದ್ದಿನ್ ಅವರ ಜೊತೆ ಹೋಗುತ್ತಿರುವಾಗ ಕಾರು ಮಲ್ಲಾಪುರ ಗೊಲ್ಲರಹಟ್ಟಿ ಬಳಿ ಬೆಂಗಳೂರು ಕಡೆಗೆ ಎನ್‌ಚ್–48ರ ಅಂಚಿನಲ್ಲಿ ರಸ್ತೆ ಬದಿಯಲ್ಲಿ ನಿಂತಿದ್ದ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಪರಿಣಾಮ ಖಲೀಲ್, ಮಲ್ಲಿಕಾ, ತಬ್ರೇಜ್, ಹಾಗೂ ಚಾಲಕ ಶಂಶುದ್ದಿನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಉಳಿದಂತೆ ನರ್ಗಿಶ್, ರೆಹಾನ್, ರೆಹಮಾನ್ ಇವರುಗಳು ಗಂಭೀರವಾಗಿ ಗಾಯಗೊಂಡಿದ್ದು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರಮೇಂದ್ರ ಕುಮಾರ್ ಮೀನಾ ತಿಳಿಸಿದ್ದಾರೆ.

ಈ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




**ಪ್ರಮುಖ ಸುದ್ದಿ**

### 7 ಶಿಕ್ಷಕರಿಗೆ ಜಿಲ್ಲಾ ಮಟ್ಟದ ವಿಶೇಷ ಪ್ರಶಸ್ತಿ ಪ್ರಧಾನ

# ಜಿಲ್ಲಾ ಮಟ್ಟದ ಶಿಕ್ಷಕ ಪ್ರಶಸ್ತಿಗೆ 18 ಮಂದಿ ಆಯ್ಕೆ

» ಚಿತ್ರದುರ್ಗ

ಜಿಲ್ಲಾ ಆಯ್ಕೆ ಸಮಿತಿ 18 ಶಿಕ್ಷಕರನ್ನು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಹಾಗೂ 7 ಶಿಕ್ಷಕರನ್ನು ಜಿಲ್ಲಾ ಮಟ್ಟದ ವಿಶೇಷ ಪ್ರಶಸ್ತಿ ಆಯ್ಕೆ ಮಾಡಿದೆ. ಸೆ.5 ರಂದು ತ.ರಾ.ಸು ರಂಗಮಂದಿರದಲ್ಲಿ ಜರುಗುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಭಾಜನರಾದ ಶಿಕ್ಷಕರನ್ನು ಸನ್ಮಾನಿಸಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ರವಿಶಂಕರ್ ರೆಡ್ಡಿ ತಿಳಿಸಿದ್ದಾರೆ.

**ಪ್ರೌಢಶಾಲೆ ವಿಭಾಗ:** ಚಳ್ಳಕೆರೆ ತಾಲೂಕು ಹಿರೇಹಳ್ಳಿಶ್ರೀಚಿಂತಾಮಣೇಶ್ವರಿಗ್ರಾಮಾಂತರ ಪ್ರೌಢಶಾಲೆ ಸಹ ಶಿಕ್ಷಕಿ ಎಚ್.ಕೆ. ರಶ್ಮಿ, ಹೊಸದುರ್ಗ ಸರ್ಕಾರಿ ಪದವಿ ಪೂರ್ವ ಕಾಲೇಜು ಸಹಶಿಕ್ಷಕ ಕೆ.ಎನ್. ಶ್ರೀಧರಶೆಟ್ಟಿ, ಹೊಳಲ್ಕೆರೆ ತಾಲೂಕು ಮಲ್ಲಾಡಿಹಳ್ಳೀ ಅನಾಥ ಸೇವಾಶ್ರಮ ಪದವಿ ಪೂರ್ವ ಕಾಲೇಜು ಸಹಶಿಕ್ಷಕ ಬಿ.ಪಿ ದಕ್ಷಣಾಮೂರ್ತಿ, ಮೊಳಕಾಲ್ಮೂರು ತಾಲ್ಲೂಕು ಕೊಂಡ್ಲಹಳ್ಳಿ



ಗ್ರಾಮಾಂತರ ಪೌಢಶಾಲೆ ಮುಖ್ಯ ಶಿಕ್ಷಕ ಸಿಎಂಎಸ್ ತಿಪ್ಪೇಸ್ವಾಮಿ, ಚಿತ್ರದುರ್ಗ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜುಚಿತ್ರಕಲಾ ಶಿಕ್ಷಕ ಟಿ.ಎಸ್ ಪ್ರಸನ್ನ ಕುಮಾರ್ ಚಿತ್ರದುರ್ಗ ತಾಲ್ಲೂಕು ಮಾನಂಗಿ ಶ್ರೀ ಆಂಜನೇಯಸ್ವಾಮಿ ಪೌಢಶಾಲೆಯ ಶಿಕ್ಷಕಿ ಜಿ.ಪೂರ್ಣಿಮಾ.

**ಹಿರಿಯ ಪ್ರಾಥಮಿಕ ಶಾಲಾ ವಿಭಾಗ:** ಹಿರಿಯೂರು ತಾಲ್ಲೂಕು ಬಗ್ಗನಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯ ಶಿಕ್ಷಕ ಕೆ.ಎನ್.ರಾಜಪ್ಪ, ಚಳ್ಳಕೆರೆ ತಾಲ್ಲೂಕು ಸೋಮಗುದ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಎಂ. ರುದ್ರಮುನಿ, ಹೊಳಲ್ಕೆರೆಯ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಸಹ ಶಿಕ್ಷಕಿ ಶಾನವಾಜ್ ಬೇಗ, ಹೊಸದುರ್ಗ ತಾಲ್ಲೂಕು ಮಲ್ಲಪ್ಪನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಚ್. ಮಂಜುಳ ಮೊಳಕಾಲ್ಮೂರು ತಾಲ್ಲೂಕು ಯರ್ರೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪದವೀಧರೇತರ ಮುಖ್ಯ ಶಿಕ್ಷಕ ಹುಸೇನ್ ಸಾಬ್, ಚಿತ್ರದುರ್ಗ ತಾಲ್ಲೂಕು ಹಿದಾಯತ್‌ಪುರ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಸಹಶಿಕ್ಷಕ ಆರ್. ಜೆ.ಮೊಹಮ್ಮದ್ ತಾಜೀರ್ ಬಾಷಾ .

ಪುಟ ↘ 2

## ಫಾಸ್ಟ್ ನ್ಯೂಸ್

### ಜಿಲ್ಲಾ ಮಟ್ಟದ ಶಿಕ್ಷಕ ಪ್ರಶಸ್ತಿಗೆ 18 ಮಂದಿ ಆಯ್ಕೆ

» ಮೊದಲ ಪುಟದಿಂದ

**ಕಿರಿಯ ಪ್ರಾಥಮಿಕ ಶಾಲೆ ವಿಭಾಗ:** ಚಳ್ಳಕೆರೆ ತಾಲ್ಲೂಕು ಖಂಡೇನಹಳ್ಳಿ ಗೊಲ್ಲರಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹಶಿಕ್ಷಕ ಕೆ.ಜಗನ್ನಾಥ್, ಗುಡ್ಡದ ಕಪಿಲೆ ಕಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಟಿ.ಸೌಭಾಗ್ಯ, ಹೊಸದುರ್ಗ ತಾಲ್ಲೂಕು ಬಾಚಾವರ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಅಜೀಮುಲ್ಲಾ ಷರೀಫ್, ಮೊಳಕಾಲ್ಮೂರು ತಾಲ್ಲೂಕು ಗುಂಡ್ಲೂರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕ ಹನುಮಂತಪ್ಪ, ಚಿತ್ರದುರ್ಗ ತಾಲ್ಲೂಕು ಹಿರೇಗುಂಟನೂರು ಸರ್ಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆಯ ಸಹ ಶಿಕ್ಷಕಿ ಆರ್.ಪಾರ್ವತಿಬಾಯಿ, ಅರಬಗಟ್ಟ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕ ಜಿ.ಎಲ್ ಶಿವಕುಮಾರ್.

ವಿಶೇಷ ಪ್ರಶಸ್ತಿ ಆಯ್ಕೆಯಾದ ಶಿಕ್ಷಕರ ಪಟ್ಟಿ: ಚಿತ್ರದುರ್ಗ ತಾಲ್ಲೂಕು ಚವಲಹಳ್ಳಿ ಸರ್ಕಾರಿ ಪ್ರೌಢಶಾಲೆಯ ಸಹಶಿಕ್ಷಕ ಸಿ.ಜಿ.ಹಾಲೇಶಿ, ತುರುವನೂರು ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕ ಶಿವಣ್ಣ, ಲಕ್ಷ್ಮೀ ಸಾಗರ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಎಸ್.ಗುರುಮೂರ್ತಿ, ಕಡಬನಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ವಿಶ್ವನಾಥ.ಎಂ, ಚಳ್ಳಕರೆ ತಾಲ್ಲೂಕಿನ ಜಾಗನೂರಹಟ್ಟಿ ಸರ್ಕಾರಿ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯ ಶಿಕ್ಷಕ ರಾಮಚಂದ್ರ ಮರೆಕ್ಕನವರ, ಕಸವಿಗೊಂನಹಳ್ಳಿ ಗೊಲ್ಲರಹಟ್ಟಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ತಿಪ್ಪೇಸ್ವಾಮಿ, ಮೊಳಕಾಲ್ಮೂರು ತಾಲ್ಲೂಕು ರಾಂಪುರ ಬಸವೇಶ್ವರ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಬಿ.ಟಿ.ರವಿ.

### ಮಕ್ಕಳ ಪಾಲನಾ ಕೇಂದ್ರದಲ್ಲಿದ್ದ ಅಪ್ರಾಪ್ತೆ ಮೇಲೆ ಮತ್ತೆ ಅತ್ಯಾಚಾರ

2019ರಲ್ಲಿ ಬಾಲಕಿ ಮೇಲೆ ಅತ್ಯಾಚಾರ ಹಿನ್ನೆಲೆ ಮಕ್ಕಳ ಪಾಲನಾ ಕೇಂದ್ರದಲ್ಲಿ ಸಂತ್ರಸ್ತ ಬಾಲಕಿಯನ್ನು ಇಡಲಾಗಿತ್ತು. ಆಧಾರ್ ಕಾರ್ಡ್ ಮಾಡಿಸಲು ಪೋಷಕರು ಮನೆಗೆ ಕರೆದೊಯ್ದಿದ್ದು ಪರಿಚಯಸ್ಥ ವ್ಯಕ್ತಿಯೊಂದಿಗೆ ವಾಪಸ್ ಕೇಂದ್ರಕ್ಕೆ ಆಗಮಿಸುತ್ತಿದ್ದ ವೇಳೆ ಪರಿಚಯಸ್ಥ ವ್ಯಕ್ತಿಯಿಂದಲೇ ಬಾಲಕಿ ಮೇಲೆ ಮತ್ತೆ ಅತ್ಯಾಚಾರ ನಡೆದಿದೆ. ಬಾಲಕಿ ಗರ್ಭಿಣಿಯಾದ ಮೇಲೆ ಅತ್ಯಾಚಾರ ಕೃತ್ಯದ ಬಗ್ಗೆ ಮಾಹಿತಿ ಸಿಕ್ಕಿದ್ದು ಮಕ್ಕಳ ಪಾಲನಾ ಕೇಂದ್ರದ ಸಿಬ್ಬಂದಿಯಿಂದ ಮಹಿಳಾ ಠಾಣೆಗೆ ದೂರು ದಾಖಲಾಗಿದೆ. ಗದಗ ಮಹಿಳಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಮಂಜ್ರಾಬಾದ್ ಕೋಟೆ ನೋಡೋಕೆ ಬಂದು ಕಾಲು ಜಾರಿ ಬಿದ್ದ ಯುವಕನ ರಕ್ಷಣೆ

ಬೆಂಗಳೂರು ಮೂಲದ ವಿನಯ್ ಎಂಬಾತ ಹಾಸನದ ಮಂಜ್ರಾಬಾದ್ ಕೋಟೆ ನೋಡಲು ಬಂದು ಕಾಲು ಜಾರಿ ಬಿದ್ದಿದ್ದು ಸದ್ಯ ರಕ್ಷಣೆ ಮಾಡಲಾಗಿದೆ. ಪ್ರವಾಸಿ ಮಿತ್ರ ಪೊಲೀಸ್ ಲೋಹಿತ್ ಮತ್ತು ಪ್ರವಾಸಿಗರು ಯುವಕನನ್ನು ರಕ್ಷಿಸಿ ಜೀವ ಉಳಿಸಿದ್ದಾರೆ .

### ಕಾಮುಕರ ಬೆದರಿಕೆಗೆ ವಿದ್ಯಾರ್ಥಿನಿ ಬಲಿ

ಅಶ್ಲೀಲ ವಿಡಿಯೋ ಹರಿಬಿಡುವ ಬೆದರಿಕೆ ಹಾಕಿದ್ದ ಹಿನ್ನೆಲೆಯಲ್ಲಿ ಹೆದರಿ ಆತ್ಮಹತ್ಯೆಗೆ ಯತ್ನಿಸಿದ್ದ ವಿದ್ಯಾರ್ಥಿನಿ ಮೃತಪಟ್ಟಿದ್ದಾಳೆ. ಯುವರಿಬ್ಬರ ಬ್ಲ್ಯಾಕ್‌ಮೇಲ್‌ಗೆ ಹೆದರಿ ಆತ್ಮಹತ್ಯೆಗೆ ಯತ್ನಿಸಿದ್ದ 17 ವರ್ಷ ವಿದ್ಯಾರ್ಥಿನಿ ಚಿಕಿತ್ಸೆ ಫಲಿಸದೇ ಉಡುಪಿಯ ಮಣಿಪಾಲ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾಳೆ.

### ಚಿಕ್ಕಮಗಳೂರಿನ ಶಿವಗಂಗಾ ಗಿರಿಯಲ್ಲಿ 3 ಚಿರತೆ ಪತ್ತೆ

ಪ್ರಸಿದ್ಧ ಶಿವಗಾಂಗ ಗಿರಿಯಲ್ಲಿ ಮೂರು ಚಿರತೆಗಳು ಪತ್ತೆಯಾಗಿವೆ. ಗಿರಿ ಮೇಲಿನ ಕಲ್ಲಿನ ಬಂಡೆ ಮೇಲೆ ಮೂರು ಚಿರತೆಗಳಿರುವುದು ಪತ್ತೆಯಾಗಿದೆ. ಮದುವೆಯ ವಿಡಿಯೋ ಚಿತ್ರೀಕರಣದ ವೇಳೆ ಡ್ರೋನ್ ಕ್ಯಾಮರಾದಲ್ಲಿ ಮೂರು ಚಿರತೆಗಳು ಸೆರೆಯಾಗಿವೆ.

### ಬಾಲಕಿಯ ಬೆತ್ತಲೆ ವಿಡಿಯೋ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತಿದ್ದ ಯುವಕ ಅರೆಸ್ಟ್

ಕೊಪ್ಪಳ ಜಿಲ್ಲೆಯ ಗಂಗಾವತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪ್ರಾಪ್ತ ಬಾಲಕಿಯ ಬೆತ್ತಲೆ ವಿಡಿಯೋ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡ್ತಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಇನ್ಸಾಗ್ರಾಮ್ ಮೂಲಕ ಯುವತಿಯ ಜೊತೆ ಸ್ನೇಹ ಬೆಳೆಸಿ ಬೆತ್ತಲೆ ವಿಡಿಯೋ ತಗೆದುಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತಿದ್ದ ಯುವಕ ಅರೆಸ್ಟ್ ಆಗಿದ್ದಾನೆ.

# ಭಗೀರಥ ಮಠದ ಆಸ್ತಿಯನ್ನು ಮಠಕ್ಕೆ ನೀಡಲು ಕ್ರಮ: ಸಚಿವ ಸತೀಶ್ ಜಾರಕಿಹೊಳಿ

» **ಹೊಸದುರ್ಗ**

1960 ರ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ನವರು ಭಗೀರಥ ಮಠಕ್ಕೆ 500 ಎಕರೆ ಭೂಮಿಯನ್ನು ಲೀಜ್ ನಲ್ಲಿ ನೀಡಿದ್ದರು. ಆದರೆ, ಇದೀಗ ಅದರ ಅವಧಿ ಮುಗಿದಿದೆ. ಈ ಬಗ್ಗೆ ಸ್ವಾಮೀಜಿಯವರಿಗೆ ಯಾವುದೇ ರೀತಿಯ ಗೊಂದಲ ಬೇಡ. ಈ ಸಂಪೂರ್ಣ ಆಸ್ತಿಯನ್ನು ಮಠಕ್ಕೆ ಶಾಶ್ವತವಾಗಿ ನೀಡುವ ಬಗ್ಗೆ ಚರ್ಚೆ ನಡೆಸಿ, ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭರವಸೆ ನೀಡಿದರು.



ತಾಲ್ಲೂಕಿನ ಬ್ರಹ್ಮವಿದ್ಯಾನಗರದ ಭಗೀರಥ ಗುರುಪೀಠದಲ್ಲಿ ಭಾನುವಾರ ಆಯೋಜಿಸಿದ್ದ 'ದ್ವಿತೀಯ ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಚಿವರು, ಶಾಸಕರು ಹಿರಿಯ ಅಧಿಕಾರಿಗಳಿಗೆ ಹಾಗೂ ವಿಶೇಷ ಸಾಧಕರಿಗೆ ಸನ್ಮಾನ ಸಮಾರಂಭ ಹಾಗೂ ವನ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಈ ಕಾರ್ಯ ಮೆಚ್ಚುವಂಥದ್ದು. ಶ್ರೀಗಳು ರಾಜ್ಯಾದ್ಯಂತ ಪ್ರವಾಸ ಮಾಡಿ ಉಪ್ಪಾರ ಸಮುದಾಯವನ್ನು ಸಂಘಟನೆ ಮಾಡುತ್ತಿದ್ದಾರೆ. ಸಮುದಾಯದವರು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯಕ್ಷೇತ್ರಗಳಲ್ಲಿಮುಂದೆಬರಬೇಕು. ಸಮುದಾಯದವರು ಸ್ವಾಮೀಜಿಯವರ ಕೈ ಬಲಪಡಿಸಬೇಕು. ಸರ್ಕಾರಿ ಸೌಲಭ್ಯಗಳನ್ನು ಬೆಳೆಸಿಕೊಳ್ಳಬೇಕು. ನಮ್ಮ ಕಾಂಗ್ರೆಸ್ ಸರ್ಕಾರ ಬಡವರ ಪರವಾದ ಸರ್ಕಾರ, ಅವರ ಏಳ್ಗೆಗಾಗಿ ಶ್ರಮಿಸುತ್ತಿದೆ ಎಂದರು.

ಶೋಷಿತ ಸಮಾಜದ ಪರವಾಗಿ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತಿದೆ. ಭಾರತ ದೇಶದ ಇತಿಹಾಸವನ್ನು ಚೆನ್ನಾಗಿ ತಿಳಿಯಲು ಪ್ರಯತ್ನಿಸಿ, ಇತಿಹಾಸದ ಬಗ್ಗೆ ದಾರಿ ತಪ್ಪಿಸುವ ಪ್ರಯತ್ನ ನಡೆಯುತ್ತಿದೆ. ಮಹಾನ್ ನಾಯಕರ ಇತಿಹಾಸ ತಿಳಿದಾಗ ಮಾತ್ರ ಸರಿಯಾದ ದಾರಿಯಲ್ಲಿ ನಡೆಯಲು ಸಾಧ್ಯ ಎಂದು ಹೇಳಿದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿ, ಒಂದು ಸಮಾಜ ಅಭಿವೃದ್ಧಿ ಆಗಬೇಕಾದರೆ ಗುರಿ ಮತ್ತು ಗುರುಗಳ ಅನುಗ್ರಹ ಇರಬೇಕು. ಸಮಾಜದ ಮಕ್ಕಳು ವಿದ್ಯಾವಂತರಾಗಿ, ಆರ್ಥಿಕ ಸದೃಢರಾದಾಗ ಮಾತ್ರ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬಹುದು. ಸಮುದಾಯದಲ್ಲಿ ಒಗ್ಗಟ್ಟು ಇದ್ದರೆ, ಬಹುಬೇಗ ಮುನ್ನಡೆಯಬಹುದು. ವಿದ್ಯಾರ್ಥಿಗಳು ಕೇವಲ ಅಂಕಗಳಿಕೆ ಸೀಮಿತವಾಗದೆ, ಎಲ್ಲಾ ಕ್ಷೇತ್ರಗಳಲ್ಲೂ ಗುರುತಿಸಿಕೊಳ್ಳಬೇಕು. ರಾಜಕೀಯವಾಗಿ ಮುನ್ನಡೆಯಬೇಕು, ಅಧಿಕಾರ ಯಾರ ಮನೆಬಾಗಿಲಿಗೂ ಬರುವುದಿಲ್ಲ. ಸಂಘರ್ಷದಿಂದ ಪಡೆದುಕೊಳ್ಳಿಯೆಂದು ಕಿವಿಮಾತು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಮಾತನಾಡಿ, ಹೆಚ್ಚು ಶಿಕ್ಷಣವಂತರಾದರೆ ಮಾತ್ರ ಸಮಾಜ ಗಟ್ಟಿಯಾಗುತ್ತದೆ. ಶ್ರೀಗಳು ಸಮಾಜದ ಪರವಾಗಿ ಕೆಲಸ ಮಾಡಿದ್ದಾರೆ. ಸರ್ಕಾರದ ಕೆಲಸಕ್ಕೆ ಕೈಜೋಡಿಸಿ, ಉಪ್ಪಾರ ಸಮಾಜದ ಪರವಾಗಿರುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಸಾನಿಧ್ಯವಹಿಸಿಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ಮಾತನಾಡಿ, ನೂರಾರು ಮಕ್ಕಳು ಇಲ್ಲಿ 15-20 ವರ್ಷಗಳಿಂದ ಉಚಿತ ವಿದ್ಯಾಭ್ಯಾಸ ಮಾಡಿದ್ದಾರೆ. ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಸಂಸ್ಕಾರ ನೀಡಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ ಆರಂಭದ ಬಗ್ಗೆ ಕನಸಿದೆ, ಶೀಘ್ರ ಈ ಕಾರ್ಯ ಆರಂಭಿಸಲಾಗುವುದು. ಭಗೀರಥ ಏಕಶಿಲಾ ಮೂರ್ತಿ ಕಾಮಗಾರಿ ಆರಂಭವಾಗಿದೆ, ಸರ್ಕಾರದಿಂದ □ 12 ಕೋಟಿ ಅನುದಾನ ಬಂದಿದ್ದು, ಅದನ್ನು ಮಂಜೂರು ಮಾಡಬೇಕೆಂದು ಸಚಿವರಿಗೆ ಒತ್ತಾಯಿಸಿದರು.

ಈ ವೇಳೆ ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ, ಮಾಜಿ ಸಚಿವ ಹೆಚ್. ಆಂಜನೇಯ, ಹೊಸದುರ್ಗ ಶಾಸಕ ಬಿ.ಜಿ.ಗೋವಿಂದಪ್ಪ, ಶಾಸಕ ಎ.ಆರ್.ಕೃಷ್ಣಮೂರ್ತಿ, ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ಮುಖ್ಯ ಅತಿಥಿಗಳಾಗಿ ಬಸವರಾಜಪ್ಪ, ಲಕ್ಷ್ಮಣ್ ಉಪ್ಪಾರ್, ಶಿವಶಂಕರ್, ಹೆಚ್.ಎಸ್. ವಿಜಯ್, ಚಂದ್ರಪ್ಪ, ಉಮೇಶ್ ಬಾಬು ಸೇರಿದಂತೆ ಸಮುದಾಯದ ಸಾವಿರಾರು ಜನರು ಪಾಲ್ಗೊಂಡಿದ್ದರು.



ನಗರಕ್ಕೆ ಆಗಮಿಸುತ್ತಿದ್ದ ಸಮಾಜ ಕಲ್ಯಾಣ ಸಚಿವರನ್ನು ನಗರದ ಹೊರ ವಲಯ ಸೀಬಾರ ಸಮೀಪ ಸ್ವಾಗತಿಸಿದ ಅಖಿಲ ಕರ್ನಾಟಕ ಛಲವಾದಿ ಮಹಾಸಭಾ ಮುಖಂಡರು.



ನಗರಕ್ಕೆ ಆಗಮಿಸುತ್ತಿದ್ದ ಸಮಾಜ ಕಲ್ಯಾಣ ಸಚಿವರನ್ನು ನಗರದ ಹೊರ ವಲಯ ಸೀಬಾರ ಸಮೀಪ ಸ್ವಾಗತಿಸಿದ ಅಖಿಲ ಕರ್ನಾಟಕ ಛಲವಾದಿ ಮಹಾಸಭಾ ಮುಖಂಡರು.

## ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶ್ರೀನಿವಾಸ್‌ಮೂರ್ತಿ

### ಗ್ರಾಮೀಣ ಭಾಗದ ಶಾಲೆಗಳಿಗೆ ವಿಜ್ಞಾನದ ಚಮತ್ಕಾರಕ್ಕೆ ಸ್ಫೂರ್ತಿ: ಕೆ.ಎಸ್.ಸುರೇಶ್




» **ಚಳ್ಳಕೆರೆ**

ರಾಜ್ಯ ಪ್ರತಿಭಾ ಅಕಾಡೆಮೆ ಪ್ರತಿವರ್ಷ ಸರ್ವಪಲ್ಲಿ ಡಾ.ರಾಧಕೃಷ್ಣನ್ ಹೆಸರಿನಲ್ಲಿ ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ 2023ರ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ತಾಲ್ಲೂಕಿನ ತಿಪ್ಪಾರೆಡ್ಡಿಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಶ್ರೀನಿವಾಸ್‌ಮೂರ್ತಿಯವರಿಗೆ ದೊರಕಿದ್ದು, ಬೆಂಗಳೂರಿನಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿದರು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಎಸ್.ಸುರೇಶ್ ತಿಳಿಸಿದ್ದಾರೆ.

ಅವರು, ಈ ಬಗ್ಗೆ ಮಾಹಿತಿ ನೀಡಿ, ಕಳೆದ ಸುಮಾರು ಎರಡು ದಶಕಗಳಿಂದ ವಿಜ್ಞಾನ ವಿಭಾಗದಲ್ಲಿ ಶಿಕ್ಷಕರ ಶ್ರೀನಿವಾಸ್‌ಮೂರ್ತಿಯವರು ಗ್ರಾಮೀಣ ಭಾಗದ ಶಾಲೆಯಲ್ಲೇ ಗ್ರಾಮೀಣ ವಿದ್ಯಾರ್ಥಿಗಳಿಗೆ ವಿವಿಧ ಪ್ರಯೋಗಗಳ ಬಗ್ಗೆ ಪ್ರಾತ್ಯಕ್ಷತೆಯನ್ನು ಹಮ್ಮಿಕೊಂಡು ವಿದ್ಯಾರ್ಥಿಗಳು ಸುಲಭವಾಗಿ ವಿಜ್ಞಾನವನ್ನು ಅರ್ಥೈಸಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಜಿಲ್ಲಾ, ತಾಲ್ಲೂಕು ಹಾಗೂ ರಾಜ್ಯಮಟ್ಟದಲ್ಲಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಅವರ ತಮ್ಮದಾಗಿಸಿಕೊಂಡಿದ್ದಾರೆ. ಪ್ರಸ್ತುತ ವರ್ಷದ ರಾಧಕೃಷ್ಣನ್ ರಾಷ್ಟ್ರೀಯ ಪ್ರಶಸ್ತಿ ಪ್ರತಿಭಾ ಅಕಾಡೆಮೆ ಮೂಲಕ ಅವರಿಗೆ ದೊರಕಿದೆ. ರಾಷ್ಟ್ರ ಮಟ್ಟದ ಪ್ರಶಸ್ತಿಯಿಂದ ಶಿಕ್ಷಣ ಇಲಾಖೆಯ ಗೌರವ ಇನ್ನೂ ಹೆಚ್ಚಿದಂತಾಗಿದೆ. ಪ್ರತಿಯೊಬ್ಬ ಶಿಕ್ಷಕರಿಗೂ ಶ್ರೀನಿವಾಸ್‌ಮೂರ್ತಿ ಮಾದರಿಯಾಗಿದ್ದಾರೆ ಎಂದರು.

ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಭಾ ಅಕಾಡೆಮೆ ರಾಜ್ಯಾಧ್ಯಕ್ಷ ಶಂಕರಪಾಟೀಲ್ ಪ್ರಶಸ್ತಿ ಮತ್ತು ಪಾರಿತೋಷಕವನ್ನು ಶಿಕ್ಷಕರ ಶ್ರೀನಿವಾಸ್‌ಮೂರ್ತಿಯವರಿಗೆ ಗಣ್ಯರ ಸಮ್ಮುಖದಲ್ಲಿ ನೀಡಿ ಶುಭಹಾರೈಸಿದರು. ರೋಣ ಶಾಸಕರಾದ ಜಿ.ಎಸ್.ಪಾಟೀಲ್, ನವಲಗುಂಡ ಶಾಸಕ ಎನ್.ಎಚ್.ಕೋನಾರೆಡ್ಡಿ, ಶಿಕ್ಷಣ ತಜ್ಞ ಪ್ರೊ.ಪುತ್ತುರಾಯ ಮುಂತಾದವರು ಉಪಸ್ಥಿತರಿದ್ದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಡವರ ಪಾಲಿಗೆ ಕಾಮಧೇನು: ಶಾಂತವೀರ ಸ್ವಾಮೀಜಿ

» **ಹೊಸದುರ್ಗ**

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಬಡವರ ಪಾಲಿಗೆ ಕಾಮಧೇನುವಿನ ರೀತಿಯಲ್ಲಿ ಜನಪರ ಕಾರ್ಯಗಳನ್ನು ಮಾಡುತ್ತಿದೆ. ಮೂಲಸೌಕರ್ಯಗಳಿಂದ ವಂಚಿತವಾಗಿರುವ ಗ್ರಾಮಗಳಿಗೆ ಸಾಧ್ಯವಾದಷ್ಟು ಸೌಲಭ್ಯ ಒದಗಿಸುವುದು, ಬಡ ಕುಟುಂಬದ ಪ್ರತಿಭಾನ್ವಿತ ಮಕ್ಕಳನ್ನು ಪುರಸ್ಕರಿಸುವುದು, ಅಂಗವಿಕಲರಿಗೆ ಸಹಾಯಧನ ನೀಡುವುದು ಮತ್ತು ಮಧ್ಯಪ್ರಿಯರನ್ನು ಮದ್ಯವ್ಯಸನದಿಂದ ಹೊರ ತರಲು ಮದ್ಯವರ್ಜನ ಶಿಬಿರಗಳ ಆಯೋಜನೆ ಸೇರಿದಂತೆ ಹಲವಾರು ಸಮಾಜಮುಖಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ ಎಂದು ಕುಂಚಿಟಿಗ ಮಠದ



ಶಾಂತವೀರ ಸ್ವಾಮೀಜಿ ತಿಳಿಸಿದರು.

ಕಸಬಾ ಹೋಬಳಿಯ ಬಾಗೂರಿನ ಚನ್ನಕೇಶವ ಸ್ವಾಮಿ ದೇವಾಲಯದ ಸಭಾಂಗಣದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ, ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ ಸಮಿತಿ ಹಾಗೂ ಇತರೆ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಬರೀ ಶ್ರದ್ಧಾ ಕೇಂದ್ರವಾಗದೆ, ಜ್ಞಾನ ಕೇಂದ್ರ ಮತ್ತು ದಾಸೋಹ ಕೇಂದ್ರವನ್ನಾಗಿ ಮಾಡಿದ್ದಾರೆ. ಈ ಶ್ರೇಯಸ್ಸು ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗಡೆಯವರಿಗೆ ಸಲ್ಲುತ್ತದೆ ಎಂದು ಹೇಳಿದರು. ಈ ಸಂಧರ್ಬದಲ್ಲಿ ಶಿಕ್ಷಕ ಸೋಮಶೇಖರಪ್ಪ ಉಪನ್ಯಾಸ ನೀಡಿದರು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಜಿಲ್ಲಾ ನಿರ್ದೇಶಕ ವಿನಯ್ ಕುಮಾರ್ ಸುವರ್ಣ, ಹಾಲು ರಾಮೇಶ್ವರ ವಲಯದ ಯೋಜನಾಧಿಕಾರಿ ಚಂದ್ರಶೇಖರ್ , ಬಾಗೂರು ಮೇಲ್ವಿಚಾರಕರಾದ ಸುನಿತಾ, ಸಂಜಯ್ ಸೇರಿದಂತೆ ಹಲವು ಮುಖಂಡರು ಹಾಗೂ ನೂರಾರು ಜೋಡಿ ಸತಿಪತಿಗಳು ಪಾಲ್ಗೊಂಡಿದ್ದರು.

## ಪ್ರಮುಖ ಸುದ್ದಿ

# ಪ್ರಬಲವಾದ ಕಾನೂನಿನ ಅಸ್ತ್ರವಿದ್ದರೂ ಪೋಕ್ಸೊ, ಬಾಲ್ಯ ವಿವಾಹ ತಡೆಯುವಲ್ಲಿ ವಿಫಲತೆ ನೋವಿನ ಸಂಗತಿ

» **ಚಳ್ಳಕೆರೆ**

ರಾಷ್ಟ್ರದ ಸಂವಿಧಾನ ಮತ್ತು ಕಾನೂನು ಪೋಕ್ಸೊ ಕಾಯ್ದೆ ಮತ್ತು ಬಾಲ್ಯವಿವಾಹ ತಡೆ ಕುರಿತು ಪ್ರಬಲ ಕಾನೂನುಗಳನ್ನು ರೂಪಿಸಿದ್ದರೂ ಸಹ ಪ್ರಕರಗಳು ನಿಯಂತ್ರಣವಾಗುತ್ತಿಲ್ಲ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಅಧ್ಯಕ್ಷೆ, ನ್ಯಾಯಮೂರ್ತಿ ಬಿ.ಎಸ್.ರೇಖಾ ವಿಷಾದ ವ್ಯಕ್ತಪಡಿಸಿದರು. ಅವರು, ಶನಿವಾರ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪೊಲೀಸ್ ಇಲಾಖೆ,ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಕೀಲರ ಸಂಘ ಹಾಗೂ ಇನ್ನಿತರ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪೋಕ್ಸೊ ಕಾಯ್ದೆ ಮತ್ತು ಬಾಲ್ಯವಿವಾಹನ ನಿಷೇದ ಕಾಯ್ದೆ ಕುರಿತು ಏರ್ಪಡಿಸಿದ್ದ ಒಂದು ದಿನದ ವಿಶೇಷ ಕಾರ್ಯಗಾರವನ್ನು ಗಿಡಕ್ಕೆ ನೀರು ಎರೆಯುವ ಮೂಲಕ ಉದ್ಘಾಟಿಸಿ



ಚಳ್ಳಕೆರೆ ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಪೋಕ್ಸೋ ಕಾಯ್ದೆ ಮತ್ತು ಬಾಲ್ಯವಿವಾಹನ ನಿಷೇದ ಕಾಯ್ದೆ ಕುರಿತು ಏರ್ಪಡಿಸಿದ್ದ ಒಂದು ದಿನದ ವಿಶೇಷ ಕಾರ್ಯಗಾರವನ್ನು ನ್ಯಾಯಮೂರ್ತಿ ಬಿ.ಎಸ್.ರೇಖಾ ಉದ್ಘಾಟಿಸಿದರು.

ಮಾತನಾಡಿದರು.

ಕೆಲವು ಸಂದರ್ಭಗಳಲ್ಲಿ ಬಂಧುಗಳು, ಪರಿಚಿತರೆ ಇಂತಹ ಕೃತ್ಯವನ್ನು ಎಸಗುತ್ತಿದ್ದು, ಈ ಬಗ್ಗೆ ಅನ್ಯಾಯಕ್ಕೆ ಒಳಗಾದರೂ ಧ್ವನಿಎತ್ತದೆ ಮೌನಕ್ಕೆ ಶರಣಾಗಿರುವುದು ನೋವಿನ ಸಂಗತಿ. ಸರ್ಕಾರ ಮತ್ತು ಪೊಲೀಸ್ ಇಲಾಖೆ ಈ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಎರಡೂ ಸಮಸ್ಯೆಗಳ ನಿಯಂತ್ರಣಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿವೆ. ಆದರೆ, ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳಿಂದ ಹೆಚ್ಚು ಪ್ರತಿರೋಧ ವ್ಯಕ್ತವಾಗುತ್ತಿಲ್ಲ ಎಂದರು.

ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಎಂ.ವಿಜಯ ಮಾತನಾಡಿ, ಇಂತಹ ಪ್ರಕರಣಗಳ ಆರೋಪಿಗಳಿಗೆ ಶಿಕ್ಷೆಯಾಗುತ್ತಿರುವುದು ವಿರಳವಾಗಿದೆ. ಆರೋಪಿಗಳನ್ನು ಬಂಧಿಸಿ ಅವರಿಗೆ ಶಿಕ್ಷೆ ವಿಧಿಸಿದರೆ ಮಾತ್ರ ಇಂತಹ ಪ್ರಕರಣಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು. ಜಿಲ್ಲೆಯಲ್ಲಿ ಬಹುತೇಕ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣಗಳು ನಿಯಂತ್ರಣವಾಗಿ ನಡೆಯುತ್ತಿದ್ದರು ಅವುಗಳನ್ನು ನಿಯಂತ್ರಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಅಪ್ರಾಪ್ತ ಯುವಕ, ಯುವತಿಯರಲ್ಲೂ ಸಹ ಕಾನೂನು ಬಗ್ಗೆ ಸೂಕ್ತ ತಿಳುವಳಿಕೆ ಇಲ್ಲದೆ ಆರೋಪಗಳಲ್ಲಿ ತೊಡಗುತ್ತಾರೆ. ಹಿರಿಯರಿಂದ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಇದೆ, ವಿಶೇಷವಾಗಿ ಪೊಲೀಸ್ ಇಲಾಖೆ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳದೇ ಇರುವುದು ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶೆ ರೇಷ್ಮ ಕಲಕಪ್ಪ ಗೋಣೆ, ಪ್ರಧಾನ ನ್ಯಾಯಾಧೀಶೆ ಗಾಯಿತ್ರಿ ಎಸ್. ಕಾಟೆ, ಅಪರ ಸಿವಿಲ್ ನ್ಯಾಯಾಧೀಶ ಗೌಡ ಜಗದೀಶ್ ರುದ್ರೆ, ವಕೀಲರ ಸಂಘದ ಅಧ್ಯಕ್ಷ ಜಿ.ಎಂ.ಆನಂದಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಎಚ್.ರಂಗನಾಥ, ಡಿವೈಎಸ್ಪಿ ರಾಜಣ್ಣ, ತಹಶೀಲ್ದಾರ್ ರೇಹಾನ್ ಪಾಷ, ಇಒ ಹೊನ್ನಯ್ಯ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಭಾರತಿ ಆರ್.ಬಣಕಾರ್, ತಾಲ್ಲೂಕು ಅಧಿಕಾರಿ ಸಿ.ಕವಿತಾ, ಪ್ರಾದೇಶಿಕ ಸಂಯೋಜಕ ಕೆ.ರಾಘವೇಂದ್ರಭಟ್, ಬಿಇಒ ಕೆ.ಎಸ್.ಸುರೇಶ್, ಸಿಡಿಪಿಒ ಹರಿಪ್ರಸಾದ್ ಮುಂತಾದವರು ಭಾಗವಹಿಸಿದ್ದರು.

## ಫಾಸ್ಟ್ ನ್ಯೂಸ್

### ಜೆ.ಪಿ.ನಗರದ ನಿವಾಸದಲ್ಲಿ ಹೆಚ್‌ಡಿಕೆ ವಿಶ್ರಾಂತಿ

4 ದಿನಗಳ ಕಾಲ ಅಪೋಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹೆಚ್‌ಡಿ ಕುಮಾರಸ್ವಾಮಿ ಅವರು ನಿನ್ನೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಬಳಿಕ ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದಾರೆ. ಜೆ.ಪಿ.ನಗರದ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ವೈದ್ಯರ ಸಲಹೆ ಮೇರೆಗೆ ಸಂಪೂರ್ಣ ವಿಶ್ರಾಂತಿ ಮೊರೆ ಹೋಗಿದ್ದಾರೆ.

### ಬೆಂಗಳೂರಿನಲ್ಲಿ ಮುಂದುವರಿದ ರೋಡ್ ರೇಜ್ ಪ್ರಕರಣ

ಬೆಂಗಳೂರಿನಲ್ಲಿ ಮುಂದುವರಿದ ರೋಡ್ ರೇಜ್ ಪ್ರಕರಣ. ನಾಗವಾರ ಫ್ಲೈಓವರ್ ಮೇಲೆ ನಿನ್ನೆ ರಾತ್ರಿ ಮೂವರು ದುಷ್ಕರ್ಮಿಗಳು ಬೈಕ್ ಸವಾರನ ಅಡ್ಡಗಟ್ಟಿ ಹಲ್ಲೆ ನಡೆಸಿದ್ದಾರೆ. ಹಲ್ಲೆಗೊಳಗಾದ ವ್ಯಕ್ತಿ ನಗರ ಪೊಲೀಸ್ ಆಯುಕ್ತರಿಗೆ ವಿಡಿಯೋ ಟ್ಯಾಗ್ ಮಾಡಿ ದೂರು ಸಲ್ಲಿಸಿದ್ದಾರೆ. ಹೆಣ್ಣೂರು ಟ್ರಾಫಿಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಬಸ್ ನಿಲ್ಲಿಸದಿದ್ದಕ್ಕೆ ಬಸ್ ಮೇಲೆ ಕಲ್ಲೆಸೆದು ವಿದ್ಯಾರ್ಥಿಗಳ ಆಕ್ರೋಶ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನಯಾನಗರ ಬಳಿ ಬಸ್ ನಿಲ್ಲಿಸದಿದ್ದಕ್ಕೆ ಬಸ್ ಮೇಲೆ ಕಲ್ಲೆಸೆದು ವಿದ್ಯಾರ್ಥಿಗಳು ಆಕ್ರೋಶ ಹೊರ ಹಾಕಿದ್ದಾರೆ. ಶಕ್ತಿ ಯೋಜನೆ ಎಫೆಕ್ಟ್ ಹಿನ್ನೆಲೆ ಬಸ್‌ಗಳು ತುಂಬಿ ಓಡಾಡ್ತಿವೆ. ಬಸ್ ಫುಲ್ ಇರುವ ಕಾರಣಕ್ಕೆ ನಿಲ್ಲಿಸದೇ ತೆರಳಿದೆ. ಹೀಗಾಗಿ ಕೋಪಗೊಂಡ ವಿದ್ಯಾರ್ಥಿಗಳು ಬಸ್ ಮೇಲೆ ಕಲ್ಲು ತೂರಾಡಿದ್ದಾರೆ. ಸರ್ಕಾರಿ ಬಸ್ ನ ಹಿಂಬದಿಯ ಗ್ಲಾಸ್ ಪುಡಿ ಪುಡಿಯಾಗಿದೆ. ಸರ್ಕಾರಿ ಬಸ್ ಚಾಲಕ ನಿರ್ವಾಹಕರ ವಿರುದ್ಧ ಆಕ್ರೋಶ ಹೊರ ಹಾಕಿದರು.

### ಮೋದಿ ವಿರುದ್ಧ ಕಿಡಿಕಾರಿದ ಸಚಿವ ಹೆಚ್.ಸಿ.ಮಹದೇವಪ್ಪ

ಉಚಿತ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತೆ ಎಂಬ ಹೇಳಿಕೆ ವಿಚಾರಕ್ಕೆ ಸಂಬಂಧಿಸಿ ದಾವಣಗೆರೆಯಲ್ಲಿ ಮೋದಿ ವಿರುದ್ಧ ಸಚಿವ ಹೆಚ್.ಸಿ.ಮಹದೇವಪ್ಪ ಕಿಡಿಕಾರಿದ್ದಾರೆ. ಉದ್ಯಮಿ ಅದಾನಿ, ಅಂಬಾನಿ ಸಾಲಮನ್ನಾ ಮಾಡಿದ್ರೆ ದೇಶ ದಿವಾಳಿ ಆಗಲ್ವಾ?ಕಾಂಗ್ರೆಸ್ ಸರ್ಕಾರದ ಯೋಜನೆ 1.32 ಕೋಟಿ ಬಡವರಿಗೆ ತಲುಪುತ್ತಿದೆ. ಇದರಿಂದ ಬಡವರು ಆರ್ಥಿಕವಾಗಿ ಸಬಲೀಕರಣ ಆಗ್ತಿದ್ದಾರೆ. ಅವರೇನು ಎಮ್ಮೆಯ ಸೆಗಣಿ ತೆಗೆದಿದ್ದಾರಾ? ದನ ಮೇಯಿಸಿದ್ದಾರಾ? ಇದೆಲ್ಲ ಮಾಡುವವರು ನಾವು ಎಂದ ಸಚಿವ ಹೆಚ್.ಸಿ.ಮಹದೇವಪ್ಪ ಕಿಡಿಕಾರಿದರು. ಬಿಜೆಪಿಯವರು ಸುಮ್ಮನೇ ಭಾವನಾತ್ಮಕವಾಗಿ ಮಾತನಾಡ್ತಾರೆ ಅಷ್ಟೇ. ಬಿಜೆಪಿಯವರಿಗೆ ಬಡವರ ಪರವಾಗಿ ಕೆಲಸ ಮಾಡೋದು ಗೊತ್ತಿಲ್ಲ ಎಂದರು.

### ಕಾವೇರಿ ನೀರಿಗಾಗಿ ಮಂಡ್ಯ ಜಿಲ್ಲೆಯಲ್ಲಿ ಮುಂದುವರಿದ ಪ್ರತಿಭಟನೆ

ತಮಿಳು ನಾಡಿಗೆ ಕಾವೇರಿ ನೀರು ಹರಿಸುತ್ತಿರುವ ವಿಚಾರಕ್ಕೆ ಸಂಬಂಧಿಸಿ ಬಿಸ್ಲೆರಿ ವಾಟರ್ ನಲ್ಲಿ ನಾಟಿ ಮಾಡುವ ಮೂಲಕ ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ವಿನೂತನ ಪ್ರತಿಭಟನೆ ನಡೆಸಿದ್ದಾರೆ. ಹನುಮಂತಪುರ ಗ್ರಾಮದ ಗದ್ದೆಯಲ್ಲಿ ನಾಟಿ ಮಾಡುವ ಮೂಲಕ ಆಕ್ರೋಶ ಹೊರ ಹಾಕಿದ್ದಾರೆ.

### ಕೊಪ್ಪಳದ ಕುಷ್ಟಗಿಯಲ್ಲಿ ಭಾರೀ ಮಳೆ, ಮನೆಗಳಿಗೆ ನುಗ್ಗಿದ ನೀರು

ಕೊಪ್ಪಳ ಜಿಲ್ಲೆ ಕುಷ್ಟಗಿ ಭಾಗದಲ್ಲಿ ತಡರಾತ್ರಿ ಧಾರಾಕಾರ ಮಳೆ ಸುರಿದಿದ್ದು ಕುಷ್ಟಗಿ ತಾಲೂಕಿನ ಹನುಮನಾಳ ಗ್ರಾಮದ ಮನೆಗಳಿಗೆ ನೀರು ನುಗ್ಗಿದೆ. ಗ್ರಾಮದ ಹತ್ತಾರು ಮನೆಗಳಿಗೆ ಮಳೆ ನೀರು ನುಗ್ಗಿದೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಲ್ಲದೇ ಯಲಬುರ್ಗಾ ತಾಲೂಕಿನ ಹಲವು ಜಮೀನುಗಳಿಗೆ ನೀರು ನುಗ್ಗಿದೆ.

### ಬೆಂಗಳೂರಿನ ಹಲವೆಡೆ ತುಂತುರು ಮಳೆ

ಕಳೆದ ಎರಡು ದಿನಗಳಿಂದ ನಗರದಲ್ಲಿ ವರುಣನ ಆಗಮನವಾಗುತ್ತಿದೆ. ಇಂದು ಸಹ ನಗರದಲ್ಲಿ ಬೆಳಿಗ್ಗೆಯೇ ಹಲವೆಡೆ ತುಂತುರು ಮಳೆಯಾಗುತ್ತಿದೆ. ದಾಸರಹಳ್ಳಿ, ಪೀಣ್ಯ, ಯಶವಂತಪುರ ಸೇರಿದಂತೆ ಹಲವೆಡೆ ಬೆಳಿಗ್ಗೆಯೇ ತುಂತುರು ಮಳೆ ಆರಂಭವಾಗಿದೆ. ಇನ್ನು ಗುಲಬುರಗಿ, ಯಾದಗಿರಿ, ಧಾರವಾಡ, ಬಳ್ಳಾರಿ, ಬಾಗಲಕೋಟೆ, ವಿಜಾಪುರ, ಬೆಳಗಾವಿ, ಗದಗ, ಹಾವೇರಿ ಹೀಗೆ ಈ ಭಾಗಗಳಿಗೆ ಮುಂದಿನ 3 ಗಂಟೆ ಕಾಲ ಎಲ್ಲೊ ಅಲರ್ಟ್ ಘೋಷಿಸಲಾಗಿದೆ.

---

### ಪ್ರತಿಭೆವೆಂಬ ಜ್ಞಾನದ ಕಿರಣದಿಂದ ಶೋಷಣೆಯ ಕತ್ತಲನ್ನು ಅಳಿಸಿ ಹಾಕಿ: ಸಚಿವ ಡಿ.ಸುಧಾಕರ್

# ಅಂಬೇಡ್ಕರ್‌ರವರ ಚಿಂತನೆಗೆ ಶಕ್ತಿ ತುಂಬಿ

» **ಚಳ್ಳಕೆರೆ**

ಕಳೆದ ಹಲವಾರು ವರ್ಷಗಳಿಂದ ಶೋಷಣೆ ಮತ್ತು ತುಳಿತಕ್ಕೆ ಒಳಗಾದ ಮಾದಿಗ ಸಮುದಾಯ ಜಾಗೃತಗೊಂಡು ಸಾಮಾಜಿಕ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ದಿಟ್ಟ ಹೆಜ್ಜೆ ಇಟ್ಟಿದೆ. ಡಾ.ಬಿ.ಆರ್.ಅಂಬೇಡ್ಕರ್ ಕಂಡ ಕನಸು ನನಸು ಮಾಡುವ ನಿಟ್ಟಿನಲ್ಲಿ ಸಮಾಜ ನಡೆದಿರುವುದು ಸಂತಸ ಸಂಗತಿ ಎಂದು ಜಿಲ್ಲಾ ಉಸ್ತುವಾರಿ, ರಾಜ್ಯ ಯೋಜನಾ ಮತ್ತು ಸಾಂಖಿಕ ಸಚಿವ ಡಿ.ಸುಧಾಕರ್ ತಿಳಿಸಿದರು.





ಅವರು, ನಗರದ ಅನಂತನಾಥ ಜೈನ ಭವನದಲ್ಲಿ ಜಿಲ್ಲಾ ಮಾದಿಗ ನೌಕರರ ಸಾಂಸ್ಕೃತಿಕ ಸಂಘ ನೇತೃತ್ವದಲ್ಲಿ ಚಳ್ಳಕೆರೆ ತಾಲ್ಲೂಕು ಮಾದಿಗ ನೌಕರರ ಸಂಘ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಮತ್ತು ನೂತನ ಸಚಿವ, ಶಾಸಕರಿಗೆ ಅಭಿನಂದಿಸುವ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮಾದಿಗ ಸಮುದಾಯ ಅನೇಕ ಸಂಕಷ್ಟಗಳನ್ನು ಎದುರಿಸಿ ಸಮಾಜದಲ್ಲಿ ತನ್ನದೇಯಾದ ಬದುಕನ್ನು ರೂಪಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಸಮುದಾಯದ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆಯುವ ಮೂಲಕ ಶೈಕ್ಷಣಿಕ ಪ್ರಗತಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ. ಅಂಬೇಡ್ಕರ್‌ರವರ ಚಿಂತನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ತಾವೆಲ್ಲರೂ ಸಂಘಟಿತರಾಗಿ ಅಭಿವೃದ್ಧಿ ಪಥದತ್ತ ಹೆಜ್ಜೆ ಇಡಬೇಕು ಎಂದರು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಶಾಸಕ ಟಿ.ರಘುಮೂರ್ತಿ, ಕಳೆದ ಹಲವಾರು ವರ್ಷಗಳಿಂದ ಈ ಸಮುದಾಯದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ನನ್ನ ಹ್ಯಾಟ್ರಿಕ್ ಗೆಲುವಿನಲ್ಲಿ ಈ ಸಮಾಜದ ಬಂಧುಗಳ ಪಾತ್ರ ಹೆಚ್ಚಿದೆ. ದಲಿತರಲ್ಲಿ ಮೂಡುವ ಅಸಮಾನತೆಯನ್ನು ತೊಡೆದು ಹಾಕಬೇಕಿದೆ ಸಮುದಾಯದ ವಿಚಾರಗಳು ಬಂದಾದ ಪಕ್ಷಬೇದ ಮರೆತು ಸಮಾಜದ ಹಿತಕ್ಕಾಗಿ ಕಾರ್ಯನಿರ್ವಹಿಸುತ್ತೇನೆ. ಯಾವುದೇ ಸಂದರ್ಭದಲ್ಲೂ ಈ ಸಮಾಜದ ಮೇಲೆ ಯಾರೂ ಸಹ ವಕ್ರದೃಷ್ಟಿಬೀರದಂತೆ ಎಚ್ಚರಿಕೆ ವಹಿಸುವೆ ಎಂದರು.

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಸಮುದಾಯದ ಎಲ್ಲಾ ಬಂಧುಗಳು ಸೇರಿ ವಿದ್ಯಾರ್ಥಿಗಳ ಪ್ರತಿಭಾಪುರಸ್ಕಾರ ಹಮ್ಮಿಕೊಂಡಿರುವುದು ಹೆಚ್ಚು ಸಂತಸ ತಂದಿದೆ. ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದರೆ ಮಾತ್ರ ನಿರೀಕ್ಷಿಸಿದ ಗುರಿಯನ್ನು ಮುಟ್ಟಲು ಸಾಧ್ಯ. ಮಾದಿಗ ಸಮುದಾಯಕ್ಕೆ ಹೆಚ್ಚಿನ ನೌಕರಿಭಾಗ್ಯವಿಲ್ಲ. ಆದರೂ ಸಮುದಾಯದ ಯುವಕರು ಸಂಘಟಿತರಾಗಿ ಸಮಾಜದ ಎಲ್ಲರೊಂದಿಗೆ ಸೌಹಾರ್ದತೆಯಿಂದ ಬದುಕಬೇಕು ಎಂದರು.

ದಿವ್ಯಸಾನಿಧ್ಯ ವಹಿಸಿದ್ದ ಮಾದಾರ ಚನ್ನಯ್ಯಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯಸ್ವಾಮೀಜಿ ಮಾತನಾಡಿ, ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಫೂರ್ತಿತುಂಬಲು ಈ ಕಾರ್ಯಕ್ರಮ ಆಯೋಜಿಸಿದೆ. ಕಳೆದ ಬಾರಿಗಿಂತ ಈ ಭಾರಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆದು ಸನ್ಮಾನಿತರಾಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಬದುಕು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಸಮಾಜಕ್ಕೆ ಅವನು ಏನು ಕೊಡುಗೆ ನೀಡಬಹುದು ಎಂಬ ಬಗ್ಗೆ ಚಿಂತನೆ ನಡೆಸಬೇಕು.

ಸರ್ಕಾರ ಶೈಕ್ಷಣಿಕವಾಗಿ ಅಭಿವೃದ್ಧಿಹೊಂದಲು ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದೆ. ಇದರ ಸದುಪಯೋಗ ಪ್ರಾಮಾಣಿಕವಾಗಿ ಆಗಬೇಕು ಎಂದರು. ಕೋಡಿಹಳ್ಳಿ ಆದಿಜಾಂಬವ ಪೀಠದ ಷಡಾಕ್ಷರಿಮುನಿ ಸ್ವಾಮೀಜಿ ಮಾತನಾಡಿ, ಮಾದಿಗ ಸಮುದಾಯದ ಬಂಧುಗಳು ಶೋಷಣೆ ಮುಕ್ತರಾಗಿ ಅಭಿವೃದ್ಧಿ ಪಥದತ್ತ ಹೆಜ್ಜೆ ಇಡುತ್ತಿರುವುದು ಸಮದಾನದ ಸಂಗತಿ. ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಸಮುದಾಯದ ಪರವಾಗಿ ಉತ್ತಮ ಬಾಂಧವ್ಯ ಹೊಂದಿವೆ. ಮಾದಿಗ ಸಮುದಾಯ ಇನ್ನೂ ಅತ್ಯಂತ ವಿಶಾಲವಾಗಿ ಹರಡಿದ್ದು, ಎಲ್ಲರೊಂದಿಗೆ ಸೌಹಾರ್ದತೆಯಿಂದ ಬದುಕು ನಡೆಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಧ್ಯಕ್ಷ ಡಿ.ದಯಾನಂದ ಮಾತನಾಡಿ, ನಿರೀಕ್ಷೆಗೂ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದ ಬಂಧುಗಳು ಸೇರ್ಪಡೆಯಾಗಿದ್ದೀರ, ಪ್ರತಿಭಾಪುರಸ್ಕಾರ ಕಾರ್ಯಕ್ರಮದ ಮೂಲಕ ನಾವೆಲ್ಲರೂ ಮತ್ತೊಮ್ಮೆ ಸಂಘಟಿತರಾಗಬೇಕೆಂಬ ಮಾಹಿತಿಯನ್ನು ವಿನಿಯಮ ಮಾಡಿಕೊಳ್ಳಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸಮುದಾಯದ ವಿದ್ಯಾರ್ಥಿಗಳ ಪ್ರಗತಿಗೆ ಪೂರಕವಾದ ವ್ಯವಸ್ಥೆಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ನಡೆಯುವುದು ಎಂದರು. ಉಪನ್ಯಾಸಕ ಡಾ.ಬಿ.ಎಂ.ಗುರುನಾಥ, ಸಮುದಾಯ ನಡೆದುಬಂದ ದಾರಿ ಬಗ್ಗೆ ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಸಚಿವ ನಾರಾಯಣಸ್ವಾಮಿ ಆಪ್ತ ಕಾರ್ಯದರ್ಶಿ ಸೋಮನಾಥ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ಪಿ.ಪ್ರಕಾಶ್‌ಮೂರ್ತಿ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಎಚ್.ಸಮರ್ಥರಾಯ, ನಗರಸಭಾ ಸದಸ್ಯ ಕೆ.ವೀರಭದ್ರಪ್ಪ, ಜಯಕುಮಾರ್, ನಿವೃತ್ತ ತಹಶೀಲ್ದಾರ್ ಎಂ.ಮಲ್ಲಿಕಾರ್ಜುನ, ಅಧೀಕ್ಷಕ ಅಭಿಯಂತರ ಕೆ.ಜಿ.ಜಗದೀಶ್, ನಿವೃತ್ತ ಬಿಸಿಎಂ ಅಧಿಕಾರಿ ಡಿ.ಟಿ.ಜಗನ್ನಾಥ, ಪೌರಾಯುಕ್ತ ಸಿ.ಚಂದ್ರಪ್ಪ, ನಗರಸಭಾ ಸದಸ್ಯೆ ಜಯಲಕ್ಷ್ಮಿ, ಡಿ.ಟಿ.ಶ್ರೀನಿವಾಸ್, ಹನುಮಂತರಾಯ, ಎಸ್.ಬಿ.ತಿಪ್ಪೇಸ್ವಾಮಿ, ಎಚ್. ತಿಪ್ಪೇಸ್ವಾಮಿ, ದುರುಗಪ್ಪ, ಹನುಮಂತಪ್ಪ, ಹೇಮಲತಾ, ಡಿ.ನಾಗರಾಜು, ಶ್ವೇತ, ಚನ್ನಕೇಶವ, ಜೆ.ಸಿದ್ದಲಿಂಗಮ್ಮ, ಸಣ್ಣಯಲ್ಲಪ್ಪ, ಡಿ.ಟಿ.ಶ್ರೀನಿವಾಸ್, ಡಿ.ಟಿ.ಹನುಮಂತರಾಯ ಮುಂತಾದವರು ಉಪಸ್ಥಿತರಿದ್ದರು.


---

# ಮಳೆಗಾಗಿ ನಾಯಕನಹಟ್ಟಿಯಲ್ಲಿ ದೇವರಿಗೆ ಮೊರೆ

» **ನಾಯಕನಹಟ್ಟಿ**

ರೈತರು ಮಳೆಗಾಗಿ ಆಕಾಶದತ್ತ ಮುಖಮಾಡುತ್ತಿದ್ದಾರೆ ಆದ್ದರಿಂದ ಧಾರಕಾರವಾದ ಮಳೆ ಸುರಿಸಪ್ಪ ಎಂದು ಶ್ರೀ ಗುರು ತಿಪ್ಪೇರುದ್ರಸ್ವಾಮಿಯಲ್ಲಿ ಬೇಡಿಕೊಂಡರು.

ಪಟ್ಟಣದ ಐತಿಹಾಸಿಕ ತಿಪ್ಪೇರುದ್ರಸ್ವಾಮಿಯ ದೇವರ ದರ್ಶನ ಪಡೆದ ಉಚ್ಚನ್ಯಾಯಾಲಯದ ವಕೀಲರಾದ ಸುಜಯ್ ನಂತರ ಮಾತನಾಡಿದ ಅವರು ದೇವರು ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ದೇವರು ಮಳೆಸುರಿಸುತ್ತಾರೆಂಬ ನಂಬಿಕೆ ನಮ್ಮಲ್ಲಿ ಇದೆ. ಈ ಕ್ಷೇತ್ರದ ಜನತೆ ಅತಿ ಹೆಚ್ಚು ಸಾಲ-ಸೂಲ ಮಾಡಿ ಶೇಂಗಾ ಬಿತ್ತನೆ ಮಾಡಿದ್ದಾರೆ. ಆದ್ದರಿಂದ ಅತಿ ಹೆಚ್ಚು ಮಳೆ ಸುರಿಯಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡರು.



ಈ ಸಂದರ್ಭದಲ್ಲಿ ಉಪಸ್ಥಿತರಾದ ಚೇತನ್, ತೊರೆಕೋಲಮ್ಮನಹಳ್ಳಿ ಬಸವರಾಜ್, ನಲಗೇತನಹಟ್ಟಿ ನಾಗರಾಜ್, ಎತ್ತಿನಹಟ್ಟಿ ಓಬಳೇಶ್, ಮಹದೇವಪುರ ಬೋರನಾಯಕ, ಮುದಿಯಪ್ಪ, ಜೋಗಿಹಟ್ಟಿ ಹೆಚ್.ಬಿ. ತಿಪ್ಪೇಸ್ವಾಮಿ, ಗೌಡಗೆರೆ ಮಾಜಿ ಗ್ರಾ.ಪಂ. ಅಧ್ಯಕ್ಷರಾದ ರಂಗಪ್ಪ, ಮಲ್ಲೂರಹಳ್ಳಿ ಗ್ರಾ.ಪಂ. ಮಾಜಿ ಉಪಾಧ್ಯಕ್ಷರಾದ ಕಾಟಯ್ಯ, ನೇರಲಗುಂಟೆ ಗ್ರಾಮಪಂಚಾಯಿತಿ ಅಧ್ಯಕ್ಷರಾದ ಗೋಪಾಲಿ, ಓಬನಾಯಕ, ದೊಡ್ಡಯ್ಯ, ವಿಜಯ್ ಕುಮಾರ್, ಎಸ್.ಎನ್. ತಿಪ್ಪೇಸ್ವಾಮಿ, ಎನ್.ಟಿ. ನಾಗರಾಜ್, ಮಾಜಿ ಪ.ಪಂ. ಸದಸ್ಯರಾದ ಬಸಣ್ಣ ಟಿ., ರುದ್ರಮುನಿ, ಬೋರೇಶ್, ಗೋವಿಂದಪ್ಪ, ಮಲ್ಲಿಕಾರ್ಜುನ, ತೊರೆಕೋಲಮ್ಮನಹಳ್ಳಿ ಮಧು, ಟಿ.ವಸೀಮ್ ಅಹಮದ್ ಮಾಡ್ರನ್ ಮೆಡಿಕಲ್ಸ್, ಮಾಜಿ ಪ.ಪಂ. ಸದಸ್ಯರಾದ ಮನ್ಸೂರ್, ಅಮರೇಶ್ ನಾಯಕ, ಗುಂತಕೋಲಮ್ಮನಹಳ್ಳಿ ವಕೀಲರಾದ ಮಲ್ಲೇಶ್, ಎತ್ತಿನಹಟ್ಟಿ ತಿಪ್ಪೇಸ್ವಾಮಿ, ಜಾಗನೂರಹಟ್ಟಿ ಮುತ್ತಯ್ಯ, ಕಾಂಗ್ರೆಸ್ ಮುಖಂಡರುಗಳು ಮತ್ತು ಇನ್ನಿತರರು ಉಪಸ್ಥಿತರಿದ್ದರು.

---

### ದಲಿತ ಸಮೂಹಕ್ಕೆ ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಿನ ಪ್ರಾತಿನಿಧ್ಯ ಅಗತ್ಯ: ಸಚಿವ



» **ಚಳ್ಳಕೆರೆ**

ಸ್ವಾತಂತ್ರ್ಯ ಮಹೋತ್ಸವದ ಅಮೃತ ಮಹೋತ್ಸದ ಸಂದರ್ಭದಲ್ಲೂ ಸಹ ದಲಿತ ಸಮೂಹ ರಾಜಕೀಯ ಕ್ಷೇತ್ರವೂ ಸೇರಿದಂತೆ ಇನ್ನಿತರೆ ಕ್ಷೇತ್ರಗಳಲ್ಲಿ ಪ್ರಾಧಾನ್ಯತೆಯನ್ನು ಪಡೆಯಲು ಸಂಘಟಿತರಾಗಿ ಹೋರಾಡಬೇಕಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ತಿಳಿಸಿದರು.

ಅವರು, ನಗರದ ಅನಂತನಾಥ ಜೈನ ಭವನದಲ್ಲಿ ತಾಲ್ಲೂಕು ಮಾದಿಗ ಸಾಂಸ್ಕೃತಿಕ ಸಂಘ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳ ಪ್ರತಿಭಾಪುರಸ್ಕಾರ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮಕ್ಕೆ ತಡವಾಗಿ ಆಗಮಿಸಿದಕ್ಕೆ ವಿಷಾದ ವ್ಯಕ್ತಪಡಿಸಿದ ಸಚಿವರು, ಪ್ರಸ್ತುತ ಸ್ಥಿತಿಯಲ್ಲಿ ಪ್ರಬಲ ಜಾತಿಗಳ ಸಂಘಟನೆಯೂ ಸಹ ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತಿವೆ. ಬೇರೆ ಎಲ್ಲಾ ಜಾತಿಗೆ ಹೋಲಿಸಿದರೆ ರಾಜ್ಯದಲ್ಲೂ ದಲಿತ ಸಂಖ್ಯೆ ಸಾಕಷ್ಟಿದೆ. ಉದ್ಯೋಗ, ಶಿಕ್ಷಣ ಸೇರಿದಂತೆ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಾವು ತೊಡಗಿಕೊಳ್ಳಬೇಕಿದೆ. ನಮ್ಮ ಸಮಾಜದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಎಂದಿಗೂ ಆದರ್ಶ ಎಂದರು. ಚಿತ್ರದುರ್ಗ ಕ್ಷೇತ್ರದ ಶಾಸಕ ಕೆ.ಸಿ.ವೀರೇಂದ್ರ(ಪಪ್ಪಿ) ಸನ್ಮಾನವನ್ನು ಸ್ವೀಕರಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ದಲಿತ ಸಂಘಟನೆಗಳ ಮೇಲೆ ಇತರೆ ಎಲ್ಲಾ ಸಂಘಟನೆಗಳು ಸಮಾನತೆಯನ್ನು ಕಾಣುತ್ತಾ ಬಂದಿವೆ. ದಲಿತ ಸಮೂಹದ ಬಗ್ಗೆ ಇದ್ದ ಹಿಂಜರಿಗೆ ಸ್ವಲ್ಪಮಟ್ಟದಲ್ಲಿ ದೂರವಾಗಿದೆ. ಸಮಾಜದ ಎಲ್ಲಾ ವರ್ಗಗಳು ಇಂದು ಜಾಗೃತವಾಗಿವೆ, ದಲಿತ ಸಮೂಹಕ್ಕೆ ಸಹ ಉತ್ತಮ ದಿನಗಳು ಬರಲಿ ಎಂದು ಶುಭಹಾರೈಸುತ್ತೇನೆ. ಪ್ರತಿಭಾಪುರಸ್ಕಾರ ವಿದ್ಯಾರ್ಥಿಗಳ ಭವಿಷ್ಯದ ಬದುಕಿಗೆ ದಿಕ್ಸೂಚಿಯಾಗಲಿ ಎಂದರು. ಅಧೀಕ್ಷಕ ಅಭಿಯಂತರ ಕೆ.ಜಿ.ಜಗದೀಶ್ ಮಾತನಾಡಿ, ಈ ಹಿಂದೆ ದಲಿತ ಸಮೂಹದ ವಿದ್ಯಾರ್ಥಿಗಳು ಶಾಲೆಗಳಲ್ಲಿ ಕಲಿಕೆಗೆ ಬರಲು ಅವಕಾಶಗಳೇ ಸಿಕ್ಕಿರಲಿಲ್ಲ ಎಂದರು.

---

# ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರಾಗಿ ಕೆ.ಎಂ.ನಾಗರಾಜು ಆಯ್ಕೆ

» **ಚಳ್ಳಕೆರೆ**



ತಾಲ್ಲೂಕು ವಕೀಲರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಮತದಾನದ ನಂತರ ಎಣಿಕೆ ಕಾರ್ಯ ಬಿರುಸಿನಿಂದ ನಡೆದಿದ್ದು, ಬಾರಿ ಪೈಪೋಟಿಯ ನಡುವೆ ಅಧ್ಯಕ್ಷರಾಗಿ ಕೆ.ಎಂ.ನಾಗರಾಜ ಆಯ್ಕೆಯಾದರು. ಇವರು ಮೂರನೇ ಬಾರಿಗೆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದಾರೆ. ಸೆ.2ರ ಶನಿವಾರ ತಡರಾತ್ರಿವರೆಗೂ ಮತಗಳ ಎಣಿಕೆ ಸಂದರ್ಭದಲ್ಲಿ ಕೆ.ಟಿ.ರುದ್ರೇಶ್ ಮತ್ತು ಕೆ.ಎಂ.ನಾಗರಾಜು ನಡುವೆ ಕೇವಲ ಒಂದೆರಡು ಮತಗಳ ಅಂತರದಿಂದ ಫಲಿತಾಂಶ ಏರುಪೇರು ಆಗುತ್ತಲೇ ಇತ್ತು. ಎರಡೂ ಕಡೆಯ ಬೆಂಬಲಿಗರು ಅಧಿಕ ಸಂಖ್ಯೆಯಲ್ಲಿ ಕುತೂಹಲದಿಂದಲೇ ಫಲಿತಾಂಶವನ್ನು ಎದುರು ನೋಡುತ್ತಿದ್ದರು. ಮತಗಳ ಎಣಿಕೆ ನಂತರ ಮಾಹಿತಿ ನೀಡಿದ ಚುನಾವಣಾಧಿಕಾರಿ ಮಧುಮತಿ ಒಟ್ಟು 142 ಮತದಾರರು ವಕೀಲರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಕೆ.ಟಿ.ರುದ್ರೇಶ್ 64 ಮತಗಳನ್ನು ಪಡೆದರೆ, ವಿಜೇತ ಅಭ್ಯರ್ಥಿ ಕೆ.ಎಂ.ನಾಗರಾಜು 74 ಮತಗಳನ್ನು ಪಡೆದು 10 ಮತಗಳ ಅಂತರದಿಂದ ಜಯಶೀಲರಾದರು. ಉಪಾಧ್ಯಕ್ಷರಾಗಿ ಪಾಲಯ್ಯ ಆಯ್ಕೆಯಾದರು.

**ವಕೀಲರ ಸಂಘಟನೆಗೆ ಪ್ರಾಮಾಣಿಕ ಪ್ರಯತ್ನ :** ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ಪತ್ರಿಕೆಯೊಂದಿಗೆ ಮಾತನಾಡಿದ ಕೆ.ಎಂ.ನಾಗರಾಜು, ತಾಲ್ಲೂಕು ವಕೀಲರ ಸಂಘಕ್ಕೆ ಮತ್ತೊಮ್ಮೆ ಅಧ್ಯಕ್ಷರಾಗಿ ನನ್ನ ವಕೀಲರ ಮಿತ್ರರು ನನ್ನನ್ನು ಆಯ್ಕೆ ಮಾಡಿದ್ದಾರೆ. ಮೂರನೇ ಬಾರಿಗೆ ಈ ಸ್ಥಾನ ಪಡೆಯುತ್ತಿರುವುದು ಸಂತಸವೆನ್ನಿಸುತ್ತದೆ. ಮುಂದಿನ ದಿನಗಳಲ್ಲಿ ಎಲ್ಲಾ ವಕೀಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಕೀಲರ ಸಂಘಟನೆಗೆ ಹೆಚ್ಚು ಶಕ್ತಿ ತುಂಬುವುದಾಗಿ ತಿಳಿಸಿದರು.

---

## ಪ್ರಮುಖ ಸುದ್ದಿ

# ಅಂಗದ ಮೇಲೆ ಲಿಂಗವಿಟ್ಟರೆ, ಅಪಮೃತ್ಯು ದೂರ

» **ಹೊಸದುರ್ಗ**

ಮನುಷ್ಯ ಪ್ರತಿನಿತ್ಯವೂ ಒಂದಲ್ಲ ಒಂದು ರೀತಿಯ ಒತ್ತಡದಲ್ಲಿ ಜೀವನವನ್ನು ದೂಡುತ್ತಿದ್ದಾನೆ. ಪ್ರತಿಯೊಬ್ಬ ನಿತ್ಯವೂ ಅಂಗದ ಮೇಲೆ ಲಿಂಗವಿಟ್ಟು, ಪೂಜಿಸಿದರೆ, ಮನಸ್ಸಿನ ದುಗುಡು ಹಾಗೂ ಅಪಮೃತ್ಯು ದೂರವಾಗುತ್ತದೆ ಎಂದು ಹರಿಹರ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಜಯದೇವ ಸಮುದಾಯ ಭವನದಲ್ಲಿ ತಾಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದಿಂದ ಭಾನುವಾರ ಆಯೋಜಿಸಲಾಗಿದ್ದ ಇಷ್ಟಲಿಂಗ ಪೂಜೆ ಹಾಗೂ ಶಾಸಕರಿಗೆ ಸನ್ಮಾನ ಸಮಾರಂಭದ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.




ಇಂದು ಜನರು ಖಿನ್ನತೆಗೆ ಒಳಗಾಗಿ ರೋಗಕ್ಕೆ ತುತ್ತಾಗುತ್ತಿದ್ದಾರೆ. ಶಿವಯೋಗ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ, ಶಾಂತಿ ಸಿಗುವ ಮೂಲಕ ಬದುಕು ಸುಂದರಗೊಳ್ಳಲಿದೆ. ವಚನಗಳಲ್ಲಿ ಸಮಸ್ಯೆಗಳಿಗೆ ಸಮಾಧಾನವಿದೆ. ಪ್ರಶ್ನೆಗಳಿಗೆ ಉತ್ತರವಿದೆ. ಆತ್ಮೋದ್ಧಾರಕ್ಕೆ ಬೇಕಾದ ಎಲ್ಲಾ ಅಂಶಗಳು ಇವೆ. ದಿನನಿತ್ಯ ವಚನಗಳನ್ನು ಓದುವುದರಿಂದ ಜೀವನ ಪಾವನಗೊಳ್ಳಲಿದೆ ಎಂದರು.

ಪಂಚಮಸಾಲಿಗಳು ಕೊಡುವ ಕೈಗಳೆ ಹೊರತು, ಬೇಡುವ ಕೈಗಳಲ್ಲ. ಕೃಷಿಕಾಯಕ ಮಾಡುತ್ತಿದ್ದ ಶೂದ್ರರಾದ ನಾವು ಪಂಚಮಸಾಲಿಗಳಾದೇವು. ದೇಶದಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ವೀರಶೈವ ಮಠಗಳನ್ನು ಬೆಳೆಸಿದವರೇ ಪಂಚಮಸಾಲಿಗಳು. 12 ನೇ ಶತಮಾನದಲ್ಲಿ ಬಸವಣ್ಣನ ಪ್ರಥಮ ಅನುಯಾಯಿಗ ಗಳನ್ನುವ ಪರಂಪರೆ ಹೊಂದಿರುವನಾವುಸಂಘಟಿತರಾಗಬೇಕಿದೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಬಿ.ಜಿ.ಗೋವಿಂದಪ್ಪ, ಪಂಚಮಸಾಲಿ ಸಮಾಜ ಸಮಾಜದ ಅಭಿವೃದ್ಧಿಗೆ ಸದಾ ನಿಮ್ಮ ಜೊತೆ ನಾನಿರುತ್ತೇನೆ. ಸಮಾಜದ ಬೇಡಿಕೆಯಾದ ಸಮುದಾಯ ಭವನ ನಿರ್ಮಾಣವನ್ನು ನನ್ನ ಐದು ವರ್ಷದ ಅವಧಿ ಒಳಗೆ ಕಟ್ಟಿಸಿಕೊಡುವುದಾಗಿ ಭರವಸೆ ನೀಡಿದರು.

ಯಾವುದೇ ಸಮುದಾಯ ಸಂಘಟಿತರಾದಾಗ ಮಾತ್ರ ರಾಜಕೀಯ ಶಕ್ತಿ ಪಡೆಯಲು ಸಾಧ್ಯ. ಪಂಚಮಿಸಾಲಿ ಸಮುದಾಯ ರಾಜಕೀಯವಾಗಿ ನನ್ನ ಕೈ ಹಿಡಿದಿದೆ. ಸಮುದಾಯದ ಅಭಿವೃದ್ಧಿಗೆ ಕಂಕಣಬದ್ಧನಾಗಿರುತ್ತೇನೆ ಎಂದು ಹೇಳಿದರು. ಈ ವೇಳೆ ಕಾರ್ಯಕ್ರಮದಲ್ಲಿ ತಾಲೂಕು ಘಟಕದ ಅಧ್ಯಕ್ಷ ದಯಾನಂದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷ ಮೃತ್ಯುಂಜಯಪ್ಪ, ಒಪ್ಪತ್ತಿನ ಸ್ವಾಮಿ ಸಹಕಾರ ಸಂಘದ ಅಧ್ಯಕ್ಷ ಸಿದ್ದರಾಮೇಶ್, ಕಾರ್ಯದರ್ಶಿ ಧನು ಶಂಕರ್, ಹಾಲೇಶ್, ಜಗದೀಶ್, ಪ್ರಕಾಶ್ ಮತ್ತಿತರರಿದ್ದರು.

# ಪ್ರಪಂಚ ಕಂಡ ಉತ್ತಮವಾಗ್ಮಿ ತತ್ವಜ್ಞಾನಿ, ದಾರ್ಶನಿಕ, ಮಾನವತಾ ಮೂರ್ತಿ ರಾಧಾಕೃಷ್ಣನ್



ಪ್ರಪಂಚ ಕಂಡ ಉತ್ತಮವಾಗ್ಮಿ ತತ್ವಜ್ಞಾನಿ, ದಾರ್ಶನಿಕ, ಮಾನವತಾ ಮೂರ್ತಿ ಡಾ.ಎಸ್. ರಾಧಾಕೃಷ್ಣನ್ ಭಾರತದಾದ್ಯಂತ ಡಾ. ಎಸ್. ರಾಧಾಕೃಷ್ಣನ್‌ರವರ ಜನ್ಮ ದಿನಾಚಾರಣೆಯನ್ನು ದೇಶದ ಎಲ್ಲಾ ಹಳ್ಳಿ, ನಗರ, ಪಟ್ಟಣ ಪ್ರದೇಶಗಳಲ್ಲಿ ಶಿಕ್ಷಕರ ದಿನಾಚರಣೆ ಸೆಪ್ಟೆಂಬರ್ 5 ಭಾರತೀಯರಿಗೆಲ್ಲಾ ಅತ್ಯಂತ ಪವಿತ್ರವಾದ ದಿನ. ಏಕೆಂದರೆ ಅಂದು ಶಿಕ್ಷಕರ ದಿನಾಚರಣೆಯನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

## ಬಾಲ್ಯ ಜೀವನ

ಡಾ. ಎಸ್. ಸರ್ವಪಲ್ಲಿ ರಾಧಾಕೃಷ್ಣನ್‌ರವರು ದಿನಾಂಕ 5 ರಂದು ಸೆಪ್ಟೆಂಬರ್ 1888 ರಂದು ತಮಿಳು ನಾಡಿನ ತಿರುತನಿ ಎಂಬ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ವೀರಾಸ್ವಾಮಿ ಒಬ್ಬ ದಿನಗೂಲಿ ನೌಕರ 5 ಜನ ಗಂಡು ಮಕ್ಕಳು ಮತ್ತು ಒಬ್ಬ ಮಗಳು ಇವರಿಗಿದ್ದರು. ಅತ್ಯಂತ ಬಡತನದ ಕುಟುಂಬದಲ್ಲಿ ರಾಧಾಕೃಷ್ಣನ್ ಜನ್ಮ ತಾಳಿದರು.

ವಿದ್ಯಾರ್ಥಿ ವೇತನದ ನೆರವಿನಿಂದ ಬಾಲಕ ರಾಧಾಕೃಷ್ಣನ್‌ರ ವಿಧ್ಯಾಭ್ಯಾಸ ಮುಂದುವರೆಯಿತು. ತಿರುತನಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಇವರು ಹೈಸ್ಕೂಲ್ ವಿದ್ಯಾಭ್ಯಾಸವನ್ನು ತಿರುಪತಿಯ ಲೂದರನ್ ಮಿಷನ್ ಸ್ಕೂಲಿನಲ್ಲಿ ಪಡೆದರು. ತಂದೆ ವೀರಾಸ್ವಾಮಿಗೆ ಮಗ ಆಂಗ್ಲ ಭಾಷೆ ಕಲಿಯುವುದು ಸ್ವಲ್ಪವೂ ಇಷ್ಟವಿರಲಿಲ್ಲ ಬಂದು ಬಾಂಧವರ, ಸ್ನೇಹಿತರ ಒತ್ತಡಕ್ಕೆ ಮಣಿದು ಆಂಗ್ಲ ಭಾಷೆಯನ್ನು ಕಲಿಯುವ ಅವಕಾಶ ದೊರೆಯಿತು ಮುಂದೆ ವೆಲ್ಲೂರಿನ ವೂರ್ ಹೀಸ್ ಕಾಲೇಜಿನಲ್ಲಿ ಎಫ್.ಎ. ಪದವಿ ಪಡೆದು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು ಪದವಿಯಲ್ಲಿ ತತ್ವಶಾಸ್ತ್ರ ಇವರ ಪ್ರಮುಖ ವಿಷಯವಾಗಿತ್ತು.

ವಿದ್ಯಾರ್ಥಿಯಾಗಿದ್ದಾಗ ಬಾಲಕ ರಾಧಾಕೃಷ್ಣರು ತುಂಬಾ ಗಂಭೀರ ಸ್ವಭಾವದ ಹಾಗೂ ಅತ್ಯಂತ ಎಚ್ಚರಿಕೆಯ ಬಾಲಕನಾಗಿದ್ದರು, ಉತ್ತಮ ಓದುಗಾರರಾಗಿದ್ದರು. ರಾತ್ರಿ ಎಲ್ಲಾ ಗಂಟೆ ಗಟ್ಟಲೆ ಓದುತ್ತಿದ್ದರು. ವಿದ್ಯಾರ್ಥಿ ದೆಸೆಯಲ್ಲಿ ಇರುವಾಗಲೇ ಭಾರತದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಸಂದೇಶವಾಣಿ ಆತ್ಮಗೌರವ ಇವರ ಮನಸ್ಸು ಸೆಳೆಯಿತು ರಾಷ್ಟ್ರದ ಬಗ್ಗೆ ಪ್ರೇಮ, ಗೌರವ, ಭಕ್ತಿ ಬೆಳೆಯಲು ಇವರಿಗೆ ವಿ.ಡಿ. ಸಾವರ್‌ಕರ್‌ರವರಿಂದ ಪ್ರಭಾವಿತರಾದರು ಕಟ್ಟಾ ಹಿಂದು ಆಗಿದ್ದ ಬಾಲಕ ವಿದ್ಯಾರ್ಥಿ ರಾಧಾಕೃಷ್ಣರೇ ಒಂದೇ ಒಂದು ಕಟು ನುಡಿಯನ್ನು ಆಡುತ್ತಿರಲಿಲ್ಲ. ಧರ್ಮಕ್ಕೆ ತುಂಬಾ ಬೆಲೆ ಕೊಡುತ್ತಿದ್ದರು. ಹಿಂದೂ ಧರ್ಮವನ್ನು ದೇಶ ವಿದೇಶಗಳಲ್ಲಿ ಎತ್ತಿ ಹಿಡಿದ ಕೀರ್ತಿ ಇವರಿಗೇ ಸಲ್ಲುತ್ತದೆ.

ತತ್ವ ಶಾಸ್ತ್ರದ ಬಗ್ಗೆ ಒಂದು ಪ್ರೌಢ ಪ್ರಬಂಧವನ್ನು ಬರೆದಾಗ ಇವರು ಕೇವಲ 20 ರ ಹದಿಹರೆಯದ ಯುವಕರಾಗಿದ್ದರು. ಮುಂದೆ ತಮ್ಮ ವಿದ್ಯಾಭ್ಯಾಸವನ್ನು ಜಗತ್ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಮುಂದುವರಿಸಬೇಕೆಂಬ ಉನ್ನಟ ಅಭಿಲಾಷೆ ಇವರದಾಗಿತ್ತು. ಆದರೆ ಮನೆಯಲ್ಲಿದ್ದ ಬಡತನ ಇವರ ಮನಸ್ಸಿಗೆ ಕಡಿವಾಣ ಹಾಕಿತು. ಯುವ ರಾಧಾಕೃಷ್ಣರು ಯಾವಾಗಲೂ ಹೀಗೆ ಹೇಳುತ್ತಿದ್ದರು ಯಾವುದೇ ಒಬ್ಬ ವ್ಯಕ್ತಿಯ ಸಾಧನೆಯ ಪಥದಲ್ಲಿ ಬಡತನ ಅಡ್ಡ ಬರ ಬಾರದು ಎಂದು ಬಡತನವನ್ನು ಅವರು ಎಂದೂ ದೋಷಿಸಲಿಲ್ಲ. ನೀನು ಬಡವನಾಗಿಯೇ ಅಥವಾ ಬಲ್ಲಿದನೇ ಆಗಿರು ಆದರೆ ನಿನ್ನ ಸಾಧನೆಗೆ ಅದು ಎಂದೂ ಅಡ್ಡಿಪಡಿಸುವಂತಿರ ಬಾರದು ಸಾಧಕನಿಗೆ ಸಾಧನೆಯೇ ಮುಖ್ಯ ಎಂಬುವುದಕ್ಕೆ ಇವರೇ ಉದಾಹರಣೆ.

ಅವರು ತಮ್ಮ ವಿದ್ಯಾಭ್ಯಾಸದ ಖರ್ಚಿಗೆ ಪುಟ್ಟ ಮಕ್ಕಳಿಗೆ ಮನೆ ಪಾಠ ಮಾಡಿ ತಮ್ಮ ಖರ್ಚನ್ನು ನಿಭಾಯಿಸಿಕೊಳ್ಳುತ್ತಿದ್ದರು. ಕೊನೆಗೂ ಈ ಹೋರಾಟದ ನಡುವೆಯೇ ಎಂ.ಎ. ಪದವಿಯನ್ನು ಶ್ರೇಷ್ಠ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದರು.

ಸುಂದರ ವ್ಯಕ್ತಿತ್ವದ ಶಿಕ್ಷಕ : ಮೊಟ್ಟ ಮೊದಲ ಭಾರಿಗೆ ತಮ್ಮ ಶಿಕ್ಷಕ ವೃತ್ತಿಯನ್ನು 1909 ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಉಪ ಪ್ರಾಚಾರ್ಯರಾಗಿ ಆರಂಭಿಸಿದರು ಇವರು ಕಾಲೇಜಿನಲ್ಲಿ ತತ್ವ ಶಾಸ್ತ್ರ ಮತ್ತು ತರ್ಕಶಾಸ್ತ್ರದ ಉಪನ್ಯಾಸಕರಾಗಿದ್ದರು. ನೋಡಲು ಬಹು ಸುಂದರ ವ್ಯಕ್ತಿತ್ವ ಅವರದ್ದಾಗಿತ್ತು ಎತ್ತರವಾದ ನಿಲುವು, ತೆಳು ಶರೀರ, ಕನ್ನಡಕಧಾರಿಯಾದ ಇವರು ಅಗಲವಾದ ಹಣೆಯುಳ್ಳವರಾಗಿದ್ದರು ಇವರು ಸಂಪಿಗೆಯಂತೆ ನೀಳ ಮೂಗುಳ್ಳವರಾಗಿದ್ದರು. ಮಂದಹಾಸ ಬೀರುವ ನಗುಮೊಗದ ಗಂಭೀರ ವ್ಯಕ್ತಿ ರಾಧಾಕೃಷ್ಣನ್‌ರವರಾಗಿದ್ದರು. ಯಾವಾಗಲೂ ಬಿಳಿಯ ಕೋಟು, ಮೈಸೂರು ಪೇಟ, ಬಿಳಿ ಪಂಚೆ ಧರಿಸುತ್ತಿದ್ದರು. ಇವರು ಕಾಲೇಜಿನ ಆವರಣದಲ್ಲಿ ಚುರುಕಾದ ನಡಿಗೆಯಲ್ಲಿ ನಡೆಯುತ್ತಿದ್ದಾಗ ಎಲ್ಲರೂ ಇವರನ್ನೇ ಗಮನಿಸುತ್ತಿದ್ದರು.

ಅಧ್ಯಾಪಕರಾಗಿ ಇವರು ಅತ್ಯಂತ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಇವರಲ್ಲಿ ತತ್ವಶಾಸ್ತ್ರದ ಬಗ್ಗೆ ಪಾಂಡಿತ್ಯ ಮೈಗೂಡಿತ್ತು. ಅದ್ವಿತಿಯ ನೆನೆಪಿನ ಶಕ್ತಿ ಎಂತಹ ಕ್ಲಿಷ್ಟವಿಚಾರಗಳನ್ನು ಎಂತಹ ಸಾಮಾನ್ಯ ವ್ಯಕ್ತಿಗೂ ತಿಳಿ ಹೇಳಿ ಅರ್ಥೈಸಬಲ್ಲ ಪ್ರೌಢಿಮೆ ಇವರಲ್ಲಿತ್ತು. ಎಲ್ಲಾ ವಿದ್ಯಾರ್ಥಿಗಳೂ ಇವರು ಪಾಠ ಹೇಳುವ ಶೈಲಿಗೆ, ಅವರ ಪ್ರೌಢಿಮೆಗೆ ಬೆರಗಾಗಿ ತುಂಬಾ ಮೆಚ್ಚುಗೆಯನ್ನು ಹೊಂದಿದ್ದರು. ನಿರರ್ಗಳವಾಗಿ ಅವರ ಬಾಯಿಂದ ಪ್ರೌಢ ಪದಗಳು ಬರುತ್ತಿದ್ದವು. ಕಾಲೇಜಿನಲ್ಲಿ ಎಲ್ಲಾ ವಿದ್ಯಾರ್ಥಿಗಳು ಇವರನ್ನು ಮೆಚ್ಚಿದಷ್ಟು ಇನ್ಯಾರನ್ನು ಮೆಚ್ಚುತ್ತಿರಲಿಲ್ಲ. ಕಾಲೇಜಿನಲ್ಲಿ ಇವರ ತರಗತಿಗಳು ಯಾವಾಗಲೂ ತುಂಬಿರುತ್ತಿದ್ದವು. ಯಾವ ವಿದ್ಯಾರ್ಥಿಗೂ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಒಂದೇ ಒಂದು ಕಟು ನುಡಿಯನ್ನು ಆಡದೆ ನಿಶ್ಚಬ್ಧವಾಗಿ ತರಗತಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು.



ಮುಂದೆ ಪ್ರಸಿದ್ಧ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇವರಿಗೆ ಪ್ರೊಫೆಸರ್ ಪದವಿ ಕಾದಿತ್ತು. 1918 ಜುಲೈನಲ್ಲಿ ಮಹಾರಾಜ ಕಾಲೇಜಿಗೆ ಪ್ರೋಫೆಸರ್ ಆಗಿ ವ್ಯಕ್ತಿ ಕೈಂಕರ್ಯ ಕೈಗೊಂಡರು. ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಇವರ ಪ್ರೌಢಿಮೆಯನ್ನು ಕೇಳಿದ್ದವರಾಗಿದ್ದರು. ಇಲ್ಲೂಕೂಡ ರಾಧಾಕೃಷ್ಣನ್‌ರವರು ವಿದ್ಯಾರ್ಥಿಗಳ ಅಪಾರವಾದ ಪ್ರೇಮಕ್ಕೆ ಆಕರ್ಷಿತರಾದರು. ಇವರು ತರಗತಿಗಳನ್ನು ಯಾವ ಒಬ್ಬ ವಿದ್ಯಾರ್ಥಿಯೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಯಾವಾಗಲೂ ತರಗತಿಗಳು ಕಿಕ್ಕಿರಿದು ತುಂಬಿರುತ್ತಿದ್ದವು. ಕಾಲೇಜಿನಲ್ಲೇ ಅಲ್ಲದೇ ಇವರು ಮನೆಯಲ್ಲೂ ಸಹ ವಿದ್ಯಾರ್ಥಿಗಳೊಡನೆ ಟೀ ಕುಡಿಯುವಾಗ ಅವರ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಿದ್ದರು. ನಗು ಮೊಗದ ಈ ಸರಳ, ಸುಂದರ ವ್ಯಕ್ತಿತ್ವ ಎಲ್ಲರನ್ನು ಇವರೆಡೆಗೆ ಸೂಜಿಗಲ್ಲಿನಂತೆ ಆಕರ್ಷಿಸಿತು.

ಹೃದಯ ಶ್ರೀಮಂತಿಕೆ, ಎಲ್ಲರೊಡನೆ ಸಹೃದಯಿಂದ ಬೆರೆಯುವುದು, ವ್ಯಕ್ತಿಯೊಡನೆ ಸ್ಪಂದಿಸುವುದು, ಮಂದಸ್ಮಿತ ನಗು, ಸರಳತೆ, ಆತ್ಮಸ್ಥೈರ್ಯ ಈ ಗುಣಗಳು ವಿದ್ಯಾರ್ಥಿ ತನ್ನ ಸಮಸ್ಯೆಗಳೇನೇ ಇದ್ದರೂ ಇವರ ಹತ್ತಿರ ಹೋಗಿ ಬಗೆಹರಿಸಿಕೊಳ್ಳುವಂತೆ ಇವರ ಒಡನಾಟ ಎಲ್ಲರ ಮನವನ್ನು ಸೆರೆ ಹಿಡಿಯಿತು. ಪ್ರತಿಯೊಬ್ಬರಿಂದಲೂ ಮೆಚ್ಚುಗೆ, ಪ್ರೀತಿ, ಗೌರವ ಅದರಗಳಿಗೆ ಪಾತ್ರರಾದ ಏಕೈಕ ಶಿಕ್ಷಕ ಬಂಧು ಇವರಾಗಿದ್ದರು ಇವರು ಮೈಂಡ್ ಪತ್ರಿಕೆಗೆ ಲೇಖನಗಳನ್ನು ಬರೆದು ಪ್ರಕಟಿಸಿದರು. ಎರಡನೆಯ ಪ್ರೌಢ ಬರಹ ರವೀಂದ್ರ ಠಾಗೋರ್‌ರ ತತ್ವಶಾಸ್ತ್ರ ಎಂಬ ಪುಸ್ತಕ ಪ್ರಕಟವಾಯಿತು.

ರವೀಂದ್ರನಾಥ ಠಾಗೋರ್‌ರು ಈ ಪುಸ್ತಕವನ್ನು ಓದಿ ತಮ್ಮ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ ಇವರ ಆಂಗ್ಲ ಭಾಷಾ ಪ್ರೌಢಿಮೆ, ಪದಗಳ ಜೋಡಣೆ, ವಿಷಯ ಸ್ಪಷ್ಟನೆ, ಅಪಾರ ಜ್ಞಾನವನ್ನು ಹೊಗಳಿ ಇವರಿಗೆ ಪತ್ರ ಬರೆದರು. ಇಲ್ಲಿಂದ ಮುಂದೆ ಕಲ್ಕತ್ತೆಯ ವಿಶ್ವವಿದ್ಯಾನಿಲಯ ತತ್ವಶಾಸ್ತ್ರದ ಪ್ರೋಫೆಸರ್ ಆಗಿ ಸೇವೆ ಸಲ್ಲಿಸುವ ಅವಕಾಶಕ್ಕೆ ಕರೆ ಬಂದಿತು.

ಡಾ. ರಾಧಾಕೃಷ್ಣರು ಅರೆ ಮನಸ್ಸಿನಿಂದ 1921 ರಲ್ಲಿ ರಾಜೀನಾಮೆ ಸಲ್ಲಿಸಬೇಕಾಗಿ ಬಂತು. 1918 ರಿಂದ 1921 ರ 3 ವರ್ಷಗಳ ಅಲ್ಪಕಾಲಾವಧಿಯಲ್ಲಿ ವಿದ್ಯಾರ್ಥಿಗಳ ಅಪಾರವಾದ ಮೆಚ್ಚುಗೆ ಪಾತ್ರರಾದರು. ಮೈಸೂರು ನಗರ ಹಿಂದೆಂದೂ ಕಾಣದಂತಹ ಅದ್ವಿತಿಯ ಹೃದಯ ಕಲಕುವ ಬೀಳ್ಕೊಡುಗೆ ಸಮಾರಂಭವನ್ನು ಮೈಸೂರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ನಡೆಸಿಕೊಟ್ಟರು.

ವಿದ್ಯಾರ್ಥಿಗಳು ಕುದುರೆ ಸಾರೋಟನ್ನು ತಂದರು. ಆದರೆ ಕುದುರೆಗಳ ಬದಲಿಗೆ ವಿದ್ಯಾರ್ಥಿಗಳೇ ಹೂವಿನಿಂದ ಸಾಲಾಂಕೃತ ಸಾರೋಟಿನಲ್ಲಿ ರಾಧಾಕೃಷ್ಣರನ್ನು ಕುಳ್ಳಿರಿಸಿ ಕಾಲೇಜಿನಿಂದ ರೈಲ್ ನಿಲ್ದಾಣದ 5 ಕಿ.ಮೀ. ದೂರದವರೆಗೂ ತಾವೇ ಸಾರೋಟನ್ನು ಎಳೆದುಕೊಂಡು ಹೋದರು. ಎಲ್ಲರ ಕಣ್ಣಲ್ಲೂ ನೀರು ಹೃದಯ ತುಂಬಿದ ಉದ್ವೇಗದ ಅನುಭವ. ಭಾರವಾದ ಹೃದಯದಿಂದ ನಾಮುಂದೆ., ತಾ ಮುಂದೆ ಎಂದು ಜಗ್ಗಾಡುತ್ತಾ ವಿದ್ಯಾರ್ಥಿಗಳೇ 5 ಕಿ.ಮೀ. ದೂರದವರೆಗೂ ಸಾಲೋಟನ್ನು ಎಳೆದು ಬೀಳ್ಕೊಟ್ಟರು. ಉತ್ತಮ ತತ್ವಜ್ಞಾನಿ ಡಾ. ರಾಧಾಕೃಷ್ಣನ್ ಬರೆದ ಪುಸ್ತಕಗಳನ್ನು ವಿಶ್ವವೇ ಕೊಂಡಾಡುವಂತಾಯಿತು. ಸುಪ್ರಸಿದ್ಧ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಪಾಠ ಮಾಡುವ ಸುವರ್ಣ ಅವಕಾಶ ಇವರಿಗೆ ದೊರೆಯಿತು. ಅದುವರೆಗೂ ಭಾರತೀಯರು ಕೇವಲ ವಿದ್ಯಾರ್ಥಿಗಳಾಗಿ ಅಲ್ಲಿ ವಿದ್ಯಾಭ್ಯಾಸ ಮಾಡಲು ಮಾತ್ರ ಹೋಗುತ್ತಿದ್ದರು. ಆದರೆ ಅಂತಹ ದಿವ್ಯ ಸಾನಿಧ್ಯಕ್ಕೆ ಶಿಕ್ಷಕರಾಗಿ ಪಾಠ ಮಾಡುವ ಅದೃಷ್ಠ ಇವರದ್ದಾಯಿತು.

1931 ರಲ್ಲಿ ಆಂದ್ರ ವಿಶ್ವವಿದ್ಯಾನಿಲಯದಲ್ಲಿ ಉಪ ಕುಲಪತಿಯಾಗಿ ಸೇವೆ ಸಲ್ಲಿಸುವ ಅವಕಾಶ ಇವರದ್ದಾಯಿತು. ಮುಂದೆ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಉಪ ಕುಲಪತಿಗಳಾದರು.

ಭಾರತದ ಪ್ರಪ್ರಥಮ ಪ್ರಧಾನ ಮಂತ್ರಿ ಪಂಡಿತ ಜವಾಹರ್‌ಲಾಲ್ ನೆಹರೂರವರು ಇವರನ್ನು ಯೂನಿವರ್ಸಿಟಿ ಎಜುಕೇಶನ್ ಕಮೀಷನ್‌ನ ಛೇರ್‌ಮೆನ್ ಆಗಿ ನಿಯೋಜಿಸಿದರು ಡಾ. ಎಸ್.ರಾಧಕೃಷ್ಣರ ನೇತೃತ್ವದಲ್ಲಿ ತಮ್ಮ ಹೊಚ್ಚ ಹೊಸ ಧ್ಯೇಯೋದ್ದೇಶಗಳಿಗೆ ಒತ್ತು ಕೊಟ್ಟು ಉತ್ತಷ್ಠ ಶಿಕ್ಷಣವನ್ನು ಕೊಡುವ ದೆಸೆಯಲ್ಲಿ ಇದರ ಮೇಲೆ ಬೆಳಕು ಚೆಲ್ಲಿದರು.

1949 ರಲ್ಲಿ ಡಾ॥ ಎಸ್. ರಾಧಕೃಷ್ಣನ್‌ರವರು ಭಾರತದ ರಾಯಭಾರಿಯಾಗಿ ರಷ್ಯದೇಶದೊಂದಿಗೆ ಮೈತ್ರಿ ಬೆಳಸಲು ನೇಮಕಗೊಂಡರು. ಎಲ್ಲರಿಗೂ ನೆಹರೂರವರ ಆಯ್ಕೆಯ ಬಗ್ಗೆ ಸಂದೇಹ ಮೂಡತೊಡಗಿತು. ರಷ್ಯಾದ ಉಕ್ಕಿನ ಮನುಷ್ಯ ಜೋಸೆಫ್ ಸ್ಟಾಲಿನ್ ಇವರ ವ್ಯಕ್ತಿತ್ವಕ್ಕೆ ಮರುಳಾದರು. ಏಪ್ರೀಲ್ 5-1992 ರಂದು ಭಾರತಕ್ಕೆ ಹಿಂದಿರುಗಿ ಬರಲು ಹೊರಟಾಗ ಸ್ಟಾಲಿನ್ ಇವರನ್ನು ಭೇಟಿ ಮಾಡುವ ಉನ್ನತ ಅಭಿಲಾಷೆ ವ್ಯಕ್ತಪಡಿಸಿ ಬೇಟಿ ಮಾಡಿ ಕಣ್ಣಲ್ಲಿ ನೀರು ತುಂಬಿ ಹೃದಯ ತುಂಬಿ ಮಾತನಾಡುತ್ತಾ ಪ್ರತಿಯೊಬ್ಬರೂ ನನ್ನನ್ನು ರಾಕ್ಷಸನೆಂದೇ ಪರಿಗಣಿಸಿದ್ದರು. ನೀವೊಬ್ಬರೇ ನನ್ನನ್ನು ಮಾನವನೆಂದು ಪರಿಗಣಿಸಿ ಸಹೃದಯತೆಯಿಂದ ನನ್ನ ಜೊತೆ ಬೆರತಿದ್ದೀರಿ ನೀನು ಭಾರತಕ್ಕೆ ಹಿಂದಿರುಗುತ್ತಿದ್ದೀರಾ. ನನ್ನ ಮನಸ್ಸಿಗೆ ತುಂಬಾ ವ್ಯಥೆಯಾಗುತ್ತಿದೆ ನೀವು ಸ್ಥಿರ ಕಾರ ಬಾಳಬೇಕು. ಆದರೆ ನಾನು ಹೆಚ್ಚು ಕಾಲ ಬಾಳುವುದಾದರೆ ಕೇಳಿಕೊಂಡು ಬಂದಿಲ್ಲ ಎಂದು ಗದ್ಗದಿತರಾಗಿ ಹೇಳಿದರು. ಸರಿಯಾಗಿ 6 ತಿಂಗಳ ನಂತರ ಸ್ಟಾಲಿನ್ ತೀರಿಕೊಂಡರು.

## ಸರಳ ವ್ಯಕ್ತಿತ್ವದ ರಾಷ್ಟ್ರಪತಿ

ಭಾರತದ ರಾಷ್ಟ್ರಪತಿಯಾಗಿ ರಾಧಾಕೃಷ್ಣನ್ ಆಯ್ಕೆಯಾದರು. ಒಮ್ಮೆ ರಾಷ್ಟ್ರಪತಿಯಾಗಿ ಆಯ್ಕೆಯಾದ ಮೇಲೆ ಒಂದು ಔತಣ ಕೂಟ ವಿತ್ತು. ಇವರೂ ಅದರಲ್ಲಿ ಭಾಗಿಯಾಗಿದ್ದರು. ಅಲ್ಲಿದ್ದ ಒಬ್ಬ ಇಂಗ್ಲೆಂಡ್‌ನವನೊಬ್ಬ ತನ್ನ ದೇಶದ ಜನರ ಬಗ್ಗೆ ಜಂಟಿ ಕೊಚ್ಚಿಕೊಳ್ಳುತ್ತಿದ್ದ. ದೇವರಿಗೆ ಇಂಗ್ಲೆಂಡಿನ ಜನರ ಬಗ್ಗೆ ಅಪಾರ ಪ್ರೇಮಸ್ ನಮ್ಮನ್ನು ತುಂಬು ಪ್ರೀತಿ ವಿಶ್ವಾಸದಿಂದ ನಿರ್ಮಿಸಿದ್ದಾನೆ. ಆದ್ದರಿಂದಲೇ ತುಂಬಾ ಸುಂದರವಾಗಿ, ಚೆನ್ನಾಗಿ ಇದ್ದೇವೆ ಎಂದು ಹೇಳಿದ.

ಇಂಗ್ಲೇಂಡಿನವರ ಜಂಭದ ಮಾತು ಕೇಳಿ ರಾಧಾಕೃಷ್ಣನ್‌ಗೆ ತುಂಬಾ ಬೇಸರವಾಯಿತು. ಆ ಕೂಡಲೇ ಅವನ ಜಂಭವನ್ನು ಇಳಿಸಬೇಕೆಂಬ ಉದ್ದೇಶದಿಂದ ಒಂದು ಕಥೆ ರೂಪದ ಜೋಕ್ ಹೇಳಿದರು. ಏನೆಂದರೆ ಗೆಳೆಯರೇ ಒಮ್ಮೆ ದೃವರು ಬ್ರೆಡ್ ಬೇಯಿಸಬೇಕೆಂದು ತೀರ್ಮಾನಿಸಿದ. ಮೊದಲನೆಯ ಬ್ರೇಡ್ ಅರ್ಧಬೆಂದಿತು. ಆ ಅರ್ಧಂಭರ್ದ ಬೆಂದ ಬ್ರೆಡ್‌ನಿಂದ ಇಂಗ್ಲೀಷ್ ಜನ ಜನ್ಮತಾಳಿದರು. ಮೊತ್ತೊಂದು ಬ್ರೆಡ್ ಬೇಯಿಸಲೆಂದು ಹೆಚ್ಚು ಹೊತ್ತು ಕಾಯ್ದು ತುಂಬಾ ವೇಳೆ ಕೊಟ್ಟಿದ್ದರಿಂದ ಆ ಬ್ರೆಡ್ ತುಂಬಾ ಬೆಂದು ಕರಕಲಾಯಿತು. ಬ್ರೆಡ್‌ನಿಂದಲೇ ಆಫ್ರಿಕಾದ ನೀಗ್ರೋ ಜನರು ಹುಟ್ಟಿದರು. ಮೂರನೆಯ ಬ್ರೇಡ್‌ಗೆ ಭಗವಂತ ತುಂಬ ಎಚ್ಚರಿಕೆಯಿಂದ ಬೇಯಲು ಬಿಟ್ಟ. ಮೂರನೆಯ ಬೆಡ್ ತುಂಬಾ ಹದವಾಗಿ ಬೆಂದಿತು. ಇದರಿಂದಲೇ ಭಾರತೀಯರು ಹುಟ್ಟಿದರು ಎಂದು ಅವನ ಜಂಭವನ್ನು ಇಳಿಸಿದರು. ಈ ಕಥೆ ಕೇಳಿದ ಇಂಗ್ಲೇಂಡಿನ ನಾಚಿ ತಲೆ ತಗ್ಗಿಸಿದ.

ಡಾ. ಎಸ್. ರಾಧಾಕೃಷ್ಣನ್ ಉಪ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಪ್ರಶ್ನಾವೇಳೆಯಲ್ಲಿ ರಾಜ್ಯ ಸಭೆಯ ಸಭಾಪತಿಯಾಗಿ ರಾಧಾಕೃಷ್ಣನ್ ಕುಳಿತಿದ್ದರು. ಮೊದಲನೆಯ ಪ್ರಶ್ನೆ ಸೀತಾ ಪರಮಾನಂದ್ ಕೇಳಿದರು. ಎರಡನೆಯ ಪ್ರಶ್ನೆ ಸಾವಿತ್ರಿ ದೇವಿ. ಮೂರನೆಯ ಪ್ರಶ್ನೆ ಪಾರ್ವತಿ ದೇವಿ ಕೇಳಿದರು. ಸಭಾಪತಿಯಾದ ಡಾ. ಎಸ್. ರಾಧಾಕೃಷ್ಣನ್ ಓಹೋ ಈ ದಿನ ಸೀತಾ, ಸಾವಿತ್ರಿ ಹಾಗೂ ಪಾರ್ವತಿ ದೇವಿ ಎಲ್ಲರೂ ಪ್ರತ್ಯಕ್ಷರಾಗಿದ್ದಾರೆ ಎಂದು ಹೇಳಿದರು. ಆ ಸಭೆಯಲ್ಲಿದ್ದ ಮಹಾವೀರ ತ್ಯಾಗಿ ಹಾಸ್ಯ ಚಟಾಕಿ ಹಾರಿಸುತ್ತಾ ಕೇವಲ ಸೀತಾ, ಸಾವಿತ್ರಿ, ಪಾರ್ವತಿಯರಲ್ಲದೆ ರಾಧಾಕೃಷ್ಣರೂ ಸಹ ಪ್ರತ್ಯಕ್ಷರಾಗಿದ್ದಾರೆ. ಎಲ್ಲರೂ ನಗೆ ಗಡಲಲ್ಲಿ ಮುಳುಗಿದರು.

ದೇವಮಾನವನೆಂದರೂ ತಪ್ಪಿಲ್ಲ ಇಂತಹ ಮಹನ್ ಚೈತನ್ಯ 17 ಏಪ್ರೀಲ್ 1975 ರಂದು ಇನ್ನಿಲ್ಲವಾಯಿತು. ಪ್ರಪಂಚದ ಸಹಸ್ರಾರು ಜನರು ಕಂಬನಿ ಮಿಡಿದರು. ಸ್ವಾತಂತ್ರ್ಯಾ ನಂತರ ಭಾರತದ ಅತ್ಯನ್ನುತ ಪದವಿ ಭಾರತರತ್ನ ಪ್ರಶಸ್ತಿ ಪಡೆದ ಮಹಾನ್ ಜೀವಿ ಕಣ್ಮರೆಯಾದರು. ಈ ಉತ್ಕೃಷ್ಠ ಶಿಕ್ಷಣ ತಜ್ಞನ ಬಾಳುವೆ ನಮ್ಮೆಲ್ಲರಿಗೂ ದಾರಿ ದೀಪವಾಗಲಿ.

■ ಲೇಖನ
ರಾ.ಹ.ತಿಮ್ಮೇನಹಳ್ಳಿ

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T